




**ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ**
ಅಧ್ಯಕ್ಷರು

> ಕೊರೋನಾ ಕಾರಣಗಳಿಂದ ಆರ್ಥಿಕ ಚಟುವಟಿಕೆಗಳು ನಿಧಾನಗತಿಯಲ್ಲಿ ಸಾಗಿವೆ. ಸಹಕಾರ ಸಂಸ್ಥೆಗಳಲ್ಲಿ ಸಾಲ ಪಡೆಯುವವರ ಸಂ-ಖ್ಯೆ ಕಡಿಮೆಯಾಗುತ್ತಿದ್ದು ಸಾಲ ವಸೂಲಾತಿಗೂ ಅಗತ್ಯ ಕ್ರಮಗಳನ್ನು ಕೈಗೊಂಡು ಸಂಸ್ಥೆಗಳನ್ನು ಮುನ್ನಡೆಸುವ ಸವಾಲು ನಮ್ಮೆಲ್ಲರದ್ದಾಗಿದೆ. ಈ ನಡುವೆ ಅವಧಿ ಮುಗಿದ/ಮುಗಿಯದಿರುವ ಸಹಕಾರ ಸಂಸ್ಥೆಗಳ ಚುನಾವಣೆಗಳನ್ನು ಡಿಸೆಂಬರ್ ಅಂತ್ಯದವರೆವಿಗೂ ಕೊರೋನಾ ಹಿನ್ನೆಲೆಯಲ್ಲಿ ಸಹಕಾರ ಇಲಾಖೆ ಮುಂದೂಡಿಕೆ ಮಾಡಿ ಪ್ರಕಟಣೆ ಹೊರಡಿಸಿದೆ.

# ಸರ್ಕಾರದ ಒಂದು ವರ್ಷ ಆಡಳಿತ "ಅಭಿವೃದ್ಧಿಯ ಚಿತ್ತ"

ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ರಾಜ್ಯ ಸರ್ಕಾರ ಜುಲೈ 27ಕ್ಕೆ ಒಂದು ವರ್ಷಗಳ ಆಡಳಿತ ಪೂರೈಸಿದೆ. ಈ ಅವಧಿಯಲ್ಲಿ ಮುಖ್ಯಮಂತ್ರಿ ಅವರಿಗೆ ಎದುರಾದ ಸವಾಲುಗಳೇ ಹೆಚ್ಚು. ಅವುಗಳಲ್ಲಿ ಮುಖ್ಯವಾದುದು ಕೋವಿಡ್-19 ಸೋಂಕು ಕಳೆದ 6 ತಿಂಗಳುಗಳ ಅವಧಿಯಲ್ಲಿ ತೀವ್ರಗೊಂಡ ಹಿನ್ನೆಲೆಯಲ್ಲಿ 2 ತಿಂಗಳುಗಳ ಕಾಲ ಲಾಕ್‌ಡೌನ್ ಘೋಷಣೆ ಮಾಡಿದ್ದರು ಸೋಂಕು ಹರಡುವಿಕೆ ಕಡಿಮೆಯಾಗಲಿಲ್ಲ ಇದೀಗ ಸಮುದಾಯದತ್ತ ಸೋಂಕು ಹರಡುತ್ತಿರುವುದರಿಂದ ರಾಜ್ಯದಲ್ಲಿ ಪ್ರತಿನಿತ್ಯ 4 ಸಾವಿರಕ್ಕೂ ಅಧಿಕ ಕೊರೋನಾ ಪಾಸಿಟಿವ್ ಕೇಸುಗಳು ದಾಖಲಾಗುತ್ತಲೇ ಇವೆ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉಪಚರಿಸಲು ಹಾಸಿಗೆಗಳ ಕೊರತೆ, ಜನರು ಸಾಮಾನ್ಯ ರೋಗಗಳಿಗೆ ತುತ್ತಾದರು ವೈದ್ಯೋಪಚಾರ ಪಡೆಯಲು ಕಷ್ಟಕರವಾಗುತ್ತಿದೆ.

ರಾಜ್ಯ ಸರ್ಕಾರ ಈ ಬಗ್ಗೆ ಉಪಯುಕ್ತ ಕ್ರಮಗಳನ್ನು ಕೈಗೊಂಡರೂ ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಬರಲು ಜನತೆ ಪ್ರತಿನಿತ್ಯ ಮಾಸ್ಕ್ ಧರಿಸಿ ಸಮಾಜಿಕ ಹಂತರ ಕಾಪಾಡಿಕೊಳ್ಳುವುದರ ಜೊತೆಗೆ ಕೈ ಸ್ವಚ್ಚತೆಗೆ ಆದ್ಯತೆ ನೀಡಬೇಕಾಗಿದೆ.

ಕೊರೋನಾ ಕಾರಣಗಳಿಂದ ಆರ್ಥಿಕ ಚಟುವಟಿಕೆಗಳು ನಿಧಾನಗತಿಯಲ್ಲಿ ಸಾಗಿವೆ. ಸಹಕಾರ ಸಂಸ್ಥೆಗಳಲ್ಲಿ ಸಾಲ ಪಡೆಯುವವರ ಸಂಖ್ಯೆ ಕಡಿಮೆಯಾಗುತ್ತಿದ್ದು ಸಾಲ ವಸೂಲಾತಿಗೂ ಅಗತ್ಯ ಕ್ರಮಗಳನ್ನು ಕೈಗೊಂಡು ಸಂಸ್ಥೆಗಳನ್ನು ಮುನ್ನಡೆಸುವ ಸವಾಲು ನಮ್ಮೆಲ್ಲರದ್ದಾಗಿದೆ. ಈ ನಡುವೆ ಅವಧಿ ಮುಗಿದ/ಮುಗಿಯದಿರುವ ಸಹಕಾರ ಸಂಸ್ಥೆಗಳ ಚುನಾವಣೆಗಳನ್ನು ಡಿಸೆಂಬರ್ ಅಂತ್ಯದವರೆವಿಗೂ ಕೊರೋನಾ ಹಿನ್ನೆಲೆಯಲ್ಲಿ ಸಹಕಾರ ಇಲಾಖೆ ಮುಂದೂಡಿಕೆ ಮಾಡಿ ಪ್ರಕಟಣೆ ಹೊರಡಿಸಿದೆ. ಇದರ ಜೊತೆಗೆ 2020ರ ಡಿಸೆಂಬರ್ 25ರ ಒಳಗಾಗಿ ಸರ್ವ ಸದಸ್ಯರ ಸಭೆಗಳನ್ನು ನಡೆಸುವಂತೆ ಸುತ್ತೋಲೆ ಹೊರಡಿಸಿತು. ಬಹುತೇಕ ಸಹಕಾರ ಸಂಸ್ಥೆಗಳಲ್ಲಿ ಸಹಸ್ರಾರು ಸದಸ್ಯರುಗಳು ಇದ್ದು ಸರ್ವ ಸದಸ್ಯರ ಸಭೆಗೆ ಹಾಜರಾಗಲು ಸಾಮಾಜಿಕ ಅಂತರ ಕಾಪಾಡುವುದು-ಸಭೆಯಲ್ಲಿ ಸ್ಥಳಾವಕಾಶಕ್ಕೆ ದೊಡ್ಡ ಸಭಾಂಗಣವನ್ನು ನಿಗದಿ ಮಾಡಬೇಕಾಗುತ್ತದೆ. ಸರ್ಕಾರದ ಕೋವಿಡ್-19 ಸಾಮಾನ್ಯ ಸುತ್ತೋಲೆ ಪ್ರಕಾರ 50ಕ್ಕು ಹೆಚ್ಚು ಜನರನ್ನು ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಬಾರದೆಂಬ ಹಿನ್ನೆಲೆಯಲ್ಲಿ ಸಹಕಾರ ಇಲಾಖೆಯು ಇತ್ತ ಗಮನ ಹರಿಸಬೇಕಿದೆ. ಸರ್ವ ಸದಸ್ಯರ ಸಭೆಗೆ ಭಾಗವಹಿಸುವವರ ಸಂಖ್ಯೆಯು ಶೇಕಡವಾರು ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯವೆ? ಎಂಬ ಬಗ್ಗೆ ಆಲೋಚಿಸಿ ತೀರ್ಮಾನ ಕೈಗೊಳ್ಳುವುದು ಸೂಕ್ತ ಎನಿಸುತ್ತದೆ. ಈ ಬಗ್ಗೆ ಎಲ್ಲ ಸಹಕಾರ ಸಂಸ್ಥೆಗಳಲ್ಲೂ ಕಾತುರತೆ ಇದೆ. ಕಾದು ನೋಡೋಣವೆ?

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಬಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ಬ್ಯಾಡಗಿ ಮೆಣಸಿನ ಗುಣಮಟ್ಟ ಪರೀಕ್ಷೆಗೆ ಲ್ಯಾಬ್ : ಸಚಿವ ಎಸ್.ಟಿ. ಸೋಮಶೇಖರ್ ಭರವಸೆ

**ಹಾವೇರಿ (ಬ್ಯಾಡಗಿ) :** ರಾಜ್ಯವಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಬ್ಯಾಡಗಿ ಮೆಣಸಿನಕಾಯಿಗೆ ಅದರದ್ದೇ ಆದ ವಿಶೇಷತೆ ಇದೆ. ಇದಕ್ಕೆ ಇನ್ನಷ್ಟು ಮನ್ನಣೆ ಸಿಗುವುದರ ಜೊತೆಗೆ ರೈತರಿಗೂ ಅನುಕೂಲವಾಗಬೇಕು ಎಂಬ ನಿಟ್ಟಿನಲ್ಲಿ ಬ್ಯಾಡಗಿಯ ಮೆಣಸಿನ ಕಾಯಿ ಮಾರುಕಟ್ಟೆಗೆ ಒಂದು ಪ್ರಯೋಗಾಲಯ (ಲ್ಯಾಬೋರೇಟರಿ) ವನ್ನು ಮಂಜೂರು ಮಾಡಲಾಗುವುದು ಎಂದು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ತಿಳಿಸಿದರು.



ಹಾವೇರಿ ಜಿಲ್ಲೆಯ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾತನಾಡಿದ ಸಚಿವರು, ಬ್ಯಾಡಗಿ ಮೆಣಸಿನಕಾಯಿ ಪರೀಕ್ಷೆಗೆಂದು ಲ್ಯಾಬೋರೇಟರಿಯನ್ನು ಮಾಡುವುದರಿಂದ ಮೆಣಸಿನ ಕಾಯಿ ಗುಣಮಟ್ಟವನ್ನು ಇಲ್ಲಿಯೇ ಪರೀಕ್ಷಿಸಲು ಅನುಕೂಲವಾಗಲಿದೆ. ಇದು ರೈತರ ಹಿತದೃಷ್ಟಿಯಿಂದ ಸಹಕಾರಿ. ಇನ್ನು ಬ್ಯಾಡಗಿ ಎಪಿಎಂಸಿ ಮಾರುಕಟ್ಟೆಯ ಮೂಲಸೌಲಭ್ಯಕ್ಕೆ ಈಗಾಗಲೇ 10 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ ಎಂದರು.

**ರೈತರಿಗೆ ನಮ್ಮ ಬೆಳೆ ನಮ್ಮ ಹಕ್ಕು ಅಧಿಕಾರ :** ಎಪಿಎಂಸಿ ಕಾಯ್ದೆ ತಿದ್ದುಪಡಿಯಿಂದ ರೈತರಿಗೆ ಅನುಕೂಲವಾಗಿದೆ. ಇದು ಕೇಂದ್ರ ಸರ್ಕಾರದ ಉತ್ತಮ ಯೋಜನೆಯಾಗಿದೆ. ರೈತ ತಾನು ಬೆಳೆದ ಬೆಳೆಯನ್ನು ಮುಕ್ತವಾಗಿ ಎಲ್ಲಿ ಬೇಕಾದರೂ ಮಾರಾಟ ಮಾಡುವ ಮುಕ್ತ ಹಕ್ಕನ್ನು ಹೊಂದಿದ್ದು, ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಬಹುದಾಗಿದೆ. ಈ ಮೂಲಕ ನಮ್ಮ ಬೆಳೆ ನಮ್ಮ ಹಕ್ಕು ಎಂಬುದು ರೈತರ ಮಂತ್ರವಾಗಿದೆ. ಅವರ ಬೆಳೆಗಳಿಗೆ ಅವರೇ ಬೆಲೆಯನ್ನು ನಿರ್ಧರಿಸುವ ಕಾಲ ಈಗ ಬಂದಿದೆ ಎಂದು ಸಚಿವರು ತಿಳಿಸಿದರು.

**ಸುಭಾಷಿತ :** ನಮಗೆ ಬದುಕಿನಲ್ಲಿ ಕನ್ನಡಿ ಮತ್ತು ನೆರಳಿನಂತಹ ಸ್ನೇಹಿತರು ಸಿಗಬೇಕು! ಕನ್ನಡಿ ಸುಳ್ಳು ಹೇಳುವುದಿಲ್ಲ ಮತ್ತು ನೆರಳು ಎಂತಹ ಸಂದರ್ಭದಲ್ಲೂ ಬಿಟ್ಟು ಹೋಗುವುದಿಲ್ಲ. – ಲತಾ ಮಂಗೇಶ್ಕರ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ‘ಮಾದರಿ ರಾಜ್ಯ ನಿರ್ಮಾಣ ಗುರಿ’ – ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ



**ಬೆಂಗಳೂರು :** ‘ರಾಜ್ಯದ ಅಭಿವೃದ್ಧಿಗೆ ಕೊರೊನಾ ಅಡಚಣೆಯಾಗಿದೆ. ಇದರ ಮಧ್ಯೆಯೂ ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ತಮ್ಮ ಸರ್ಕಾರಕ್ಕೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ಜುಲೈ 27 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸರಳವಾಗಿ ಏರ್ಪಡಿಸಿದ್ದ ‘ಸವಾಲುಗಳ ವರ್ಷ–ಪರಿಹಾರದ ಸ್ಪರ್ಶ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಉಳಿದಿರುವ ಅವಧಿಯಲ್ಲಿ ಸುಭದ್ರ ಸರ್ಕಾರ ನೀಡುವುದರ ಜತೆಗೆ, ಮಾದರಿ ರಾಜ್ಯ ನಿರ್ಮಾಣವೇ ನನ್ನ ಏಕೈಕ ಗುರಿ’ ಎಂದರು. ‘ಅಧಿಕಾರ ವಹಿಸಿಕೊಂಡಾಗ ಬರ ಇತ್ತು. ಕೆಲವೇ ದಿನಗಳಲ್ಲಿ ಭಾರಿ ಮಳೆ, ಪ್ರವಾಹ ಬಂದಿತು. ಈ ಅಗ್ನಿಪರೀಕ್ಷೆಯನ್ನು ಏಕಾಂಗಿಯಾಗಿ ಎದುರಿಸಿದೆ. ಒಂದು ಕಡೆಯಿಂದ ಸಂತ್ರಸ್ತರಾದವರಿಗೆ ಪರಿಹಾರ ಕಲ್ಪಿಸುವುದರ ಜತೆಗೆ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ 50 ಲಕ್ಷ ರೈತರಿಗೆ ತಲಾ ರೂ.4 ಸಾವಿರದಂತೆ ಅವರ ಖಾತೆಗಳಿಗೇ ಜಮೆ ಮಾಡುವ ಯೋಜನೆಗೆ ಚಾಲನೆ ನೀಡಿದೆ. ಮನೆ ಕಳೆದುಕೊಂಡವರಿಗೆ ಹೊಸದಾಗಿ ಮನೆ ಕಟ್ಟಿಕೊಡಲು ತಲಾ ರೂ.5 ಲಕ್ಷದವರೆಗೆ ನೆರವು ನೀಡಿದೆ’ ಎಂದು ಯಡಿಯೂರಪ್ಪ ಹೇಳಿದರು.



‘ಅಭಿವೃದ್ಧಿಯಲ್ಲಿ ಎಂದೂ ಜಾತಿ, ಧರ್ಮದ ತಾರತಮ್ಯ ಮಾಡಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತರು ಎಲ್ಲರನ್ನೂ ಸಮಾನ ದೃಷ್ಟಿಯಲ್ಲಿ ಕಂಡಿದ್ದೇನೆ. ಕಳೆದ ಒಂದು ವರ್ಷದಲ್ಲಿ ಎಲ್ಲೂ ಕೋಮು ಗಲಭೆ ಆಗಿಲ್ಲ’ ಎಂದು ಅವರು ಹೇಳಿದರು.

‘ಹೊಸ ಕೈಗಾರಿಕಾ ನೀತಿ, ‘ನನ್ನ ಬೆಳೆ ನನ್ನ ಹಕ್ಕು’ ಕಲ್ಪನೆಯಡಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ, ಕೈಗಾರಿಕೆ ಸ್ಥಾಪನೆಗೆ ಮತ್ತು ಉದ್ಯೋಗ ಸೃಷ್ಟಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಕೆಲವರು ಟೀಕೆ – ಟಿಪ್ಪಣಿ ಮಾಡಿದ್ದರೂ ರಾಜ್ಯದ ಜನರು ಮುಕ್ತ ಮನಸ್ಸಿನಿಂದ ಸ್ವಾಗತಿಸಿದ್ದಾರೆ’ ಎಂದು ಯಡಿಯೂರಪ್ಪ ತಿಳಿಸಿದರು.

‘ದಿವಂಗತ ಅನಂತಕುಮಾರ್ ಅವರ ಕನಸಿನ ಸಬ್‌ಅರ್ಬನ್ ರೈಲು ಯೋಜನೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ರಸ್ತೆಗಳ ಅಭಿವೃದ್ಧಿ ಹಾಗೂ 970 ಕಿ.ಮೀ ಉದ್ದದಷ್ಟು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಮಾಡಲಾಗುತ್ತಿದೆ’ ಎಂದರು.

‘ನಾನು ಎಂದೂ ದ್ವೇಷದ ರಾಜಕಾರಣ ಮಾಡಿಲ್ಲ. ಮಾಡುವುದೂ ಇಲ್ಲ. ಸರ್ಕಾರದ ವಿರುದ್ಧ ಟೀಕೆ – ಟಿಪ್ಪಣಿ ಮಾಡುವವರನ್ನೂ ಪ್ರೀತಿಯಿಂದಲೇ ಕಂಡಿದ್ದೇನೆ’ ಎಂದು ಹೇಳಿದರು.

‘ಕಳೆದ ಲೋಕಸಭೆ ಚುನಾವಣೆಯಲ್ಲಿ 25 ಸ್ಥಾನಗಳು ಮತ್ತು ವಿಧಾನ ಸಭೆ ಉಪಚುನಾವಣೆಯಲ್ಲಿ 12 ಸ್ಥಾನ ಗಳನ್ನು ಗೆದ್ದಿದ್ದೇವೆ. ಇದಕ್ಕೆ ರಾಜ್ಯದ ಜನರ ಪ್ರೀತಿ ಮತ್ತು ವಿಶ್ವಾಸವೇ ಕಾರಣ. ಇದರ ಹಿಂದೆ ಕಾರ್ಯಕರ್ತರ ಶ್ರಮವಿದೆ’ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಂಪುಟದ ಸಚಿವರುಗಳು, ಶಾಸಕರುಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

# 30 ಲಕ್ಷ ರೈತರಿಗೆ ರೂ. 20 ಸಾವಿರ ಕೋಟಿ ಬೆಳೆ ಸಾಲ ನೀಡಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಲಹೆ

## ಸಹಕಾರ ಸಚಿವರಾಗಿ ಜವಾಬ್ದಾರಿ ನಿರ್ವಹಿಸಿದ ತೃಪ್ತಿ ಇದೆ : ಎಸ್.ಟಿ. ಸೋಮಶೇಖರ್



**ಬೆಂಗಳೂರು :** ರಾಜ್ಯ ಸರ್ಕಾರಕ್ಕೆ ಒಂದು ವರ್ಷ ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸಹಕಾರ ಇಲಾಖೆ ವತಿಯಿಂದ "ಸಹಕಾರದ ಪ್ರಗತಿ – 2020" ಸಾಧನೆಗಳ ಕಿರುಹೊತ್ತಿಗೆಯನ್ನು ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ನಿವಾಸ ಕಾವೇರಿಯಲ್ಲಿ ಜುಲೈ 26 ರಂದು ಬಿಡುಗಡೆಗೊಳಿಸಿದರು.

ಮುಂದಿನ ವರ್ಷದ ಗುರಿ 30 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂಪಾಯಿ ಕೃಷಿ ಸಾಲವನ್ನು ವಿತರಣೆ ಮಾಡಲು ಸಿದ್ಧತೆ ಮಾಡಿಕೊಳ್ಳಲು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರಿಗೆ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸೂಚಿಸಿದರು.

**ರೈತರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಿ :** ಪ್ರಸಕ್ತ ಸಾಲಿನಲ್ಲಿ ರೈತರಿಗೆ 14500 ಕೋಟಿ ರೂಪಾಯಿ ಕೃಷಿ ಸಾಲ ನೀಡುವ ಗುರಿ ಇದೆ. ಈಗಾಗಲೇ 8,50,000 ರೈತರಿಗೆ ರೂ.5,600 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ. ಯಾವುದೇ ಕಾರಣಕ್ಕೂ ರೈತರಿಗೆ ಕೃಷಿ ಚಟುವಟಿಕೆಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳಾದ ಅಶ್ವಥ್ ನಾರಾಯಣ್, ಗೃಹ ಸಚಿವರಾದ ಬಸವರಾಜ್ ಬೊಮ್ಮಾಯಿ, ಕಂದಾಯ ಸಚಿವರಾದ ಆರ್. ಅಶೋಕ್ ಅವರು ಉಪಸ್ಥಿತರಿದ್ದರು.

**ಮುಖ್ಯಮಂತ್ರಿಗಳಿಂದ ಶ್ಲಾಘನೆ :** ಮುಖ್ಯಮಂತ್ರಿಗಳ ಒಂದು ವರ್ಷದ ಸಾಧನೆ ಜೊತೆಗೆ ನಾನು ನಮ್ಮ ಸಹಕಾರ ಇಲಾಖೆಯಿಂದ 5 ತಿಂಗಳ ಅವಧಿಗೆ ಏನು ಸಾಧನೆ ಮಾಡಿದ್ದೇನೆ ಎಂಬುದರ ಕಿರುಹೊತ್ತಿಗೆಯನ್ನು ಹೊರತಂದಿದ್ದು, ಅದನ್ನು ಮುಖ್ಯಮಂತ್ರಿಗಳು ಬಿಡುಗಡೆಗೊಳಿಸಿದ್ದಾರೆ. ಅಲ್ಲದೆ, ಸಚಿವನಾಗಿ ನಾನು ನಿರ್ವಹಿಸಿದ ಜವಾಬ್ದಾರಿ ಬಗ್ಗೆ ಮುಖ್ಯಮಂತ್ರಿಗಳು ಮೆಚ್ಚುಗೆ ಸೂಚಿಸಿದ್ದಾರೆ ಎಂದು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಸುದ್ದಿಗಾರರಿಗೆ ತಿಳಿಸಿದರು. ನಾನು ಈಗಾಗಲೇ 25 ಜಿಲ್ಲೆಗಳಿಗೆ ಭೇಟಿ ನೀಡಿ ಸ್ಥಿತಿಗತಿಗಳನ್ನು ಅರಿತಿದ್ದೇನೆ. ಪ್ರತಿ ಭೇಟಿ ವೇಳೆಯೂ ರೈತರ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದೇನೆ. ಪ್ರಸಕ್ತ ಬಾರಿ ರೈತರಿಗೆ ಮಧ್ಯಮಾವಧಿ, ಅಲ್ಪಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲವಾಗಿ 14500 ಕೋಟಿ ರೂಪಾಯಿ ಸಾಲ ನೀಡುವಂತೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಈ ನಿಟ್ಟಿನಲ್ಲಿ ಚಾಲನೆ ನೀಡಲಾಗಿದ್ದು, ಈಗಾಗಲೇ 8,50,000 ರೈತರಿಗೆ ರೂ.5,600 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಕೋವಿಡ್ 19 ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಕೋವಿಡ್ ಪರಿಹಾರ ನಿಧಿಗೆ ಎಪಿಎಂಸಿ ಹಾಗೂ ಸಹಕಾರ ಇಲಾಖೆ ವತಿಯಿಂದ 53 ಕೋಟಿ ರೂಪಾಯಿ ದೇಣಿಗೆ ಸಂಗ್ರಹಿಸಿ ವಿತರಣೆ ಮಾಡಿದ್ದೇವೆ ಎಂದು ತಿಳಿಸಿದರು. ಎಪಿಎಂಸಿ ಕಾಯ್ದೆ ತಿದ್ದುಪಡಿಯಾದ ನಂತರ ಶೇಕಡಾ 1ಕ್ಕೆ ಸೆಸ್ ಇಳಿಸಲಾಗಿತ್ತು. ಬಳಿಕ ಇನ್ನೂ ಇಳಿಕೆ ಮಾಡುವ ಸಂಬಂಧ ಕೂಗು ಕೇಳಿಬಂದಿದ್ದರಿಂದ ಸಂಪುಟ ಸಭೆಯಲ್ಲಿ ಚರ್ಚಿಸಿ ಶೇ. 35ಕ್ಕೆ ಸೆಸ್ ಇಳಿಕೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಕೊರೋನಾ ವಾರಿಯರ್ಸ್ ಗಳಾದ ಆಶಾ ಕಾರ್ಯಕರ್ತೆಯರಿಗೆ ತಲಾ 3 ಸಾವಿರ ರೂಪಾಯಿಯಂತೆ 12.75 ಕೋಟಿ ರೂಪಾಯಿಯನ್ನು ಇಲಾಖೆ ವತಿಯಿಂದ ನೀಡಲಾಗುತ್ತಿದ್ದು, ಈಗಾಗಲೇ 32 ಸಾವಿರ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ನೀಡಲಾಗಿದೆ. ಉಳಿದ 10 ಸಾವಿರ ಆಶಾ ಕಾರ್ಯಕರ್ತೆಯರಿಗೆ ಶೀಘ್ರದಲ್ಲಿಯೇ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

## ದಿನಾಂಕ : 01-07-2020ರಿಂದ ಆದಾಯ ತೆರಿಗೆ ಕಲಂ 194ಎನ್‌ರ ಬದಲಾವಣೆಗಳು

ಬಹುಶಃ ನೆನಪಿರಬಹುದು ನಿಮಗೆ, ಕೇಂದ್ರ ಸರ್ಕಾರವು ನಗದು ವ್ಯವಹಾರಗಳನ್ನು ಕಡಿಮೆ ಮಾಡಲು ಆದಾಯ ತೆರಿಗೆ ಕಾಯ್ದೆಯಲ್ಲಿ 194ಎನ್ ಎಂಬ ಕಲಂ ಅನ್ನು ಸೇರಿಸಿ ದಿನಾಂಕ 01–09–2019ರಿಂದ ಜಾರಿಗೆ ತಂದಿತು. ಈ ಕಲಂ ಪ್ರಕಾರ ಯಾವುದೇ ಬ್ಯಾಂಕ್ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಸ್ಥೆಗಳು (ಅಂದರೆ ಸಹಕಾರಿ ಬ್ಯಾಂಕುಗಳು) ಅಥವಾ ಅಂಚೆ ಕಛೇರಿಗಳು ಯಾವುದೇ ಒಬ್ಬ ವ್ಯಕ್ತಿಗೆ ವಾರ್ಷಿಕವಾಗಿ ರೂ. 1 ಕೋಟಿಗೆ ಮೀರಿ ನಗದು ಪಾವತಿಸಿದರೆ, ಒಂದು ಕೋಟಿ ರೂಗಳಿಗೆ ಮೀರಿದ ನಗದು ಪಾವತಿಯ ಮೇಲೆ ಶೇ 2ರಷ್ಟು ತೆರಿಗೆಯನ್ನು ಕಡಿತಮಾಡಬೇಕು. ಆದರೆ ಈ ನಿಯಮವು ಸರ್ಕಾರಕ್ಕೆ ಅಥವಾ ಬ್ಯಾಂಕ್‌ಗಳಿಗೆ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಅಥವಾ ಅಂಚೆ ಕಛೇರಿಗಳಿಗೆ ಅಥವಾ ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿದ ನಂತರ ಅಧಿಕೃತ ಗೆಜೆಟ್‌ನಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಮಾಡುವ ಪಾವತಿಗಳಿಗೆ ಅನ್ವಹಿಸುವುದಿಲ್ಲ. ಅದರಂತೆ, ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿ ದಿನಾಂಕ 20–09–2019ರ 70/2019 ಆದಾಯ ತೆರಿಗೆ ಅಧಿಸೂಚನೆಯ ಪ್ರಕಾರ ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಯಡಿಯಲ್ಲಿ ಕಾರ್ಯನಿರ್ವಹಿಸುವ ದಲ್ಲಾಳಿಗಳು ಅಥವಾ ವ್ಯಾಪಾರಸ್ಥರು ತಮ್ಮ ಖಾತೆಯಿಂದ ಪಡೆಯುವ ನಗದಿಗೆ ಈ ನಿಯಮದ ವಿನಾಯಿತಿಯನ್ನು ನೀಡಿರುತ್ತದೆ. ಇಲ್ಲಿ ಗಮನಿಸುವ ಅಂಶ ಏನೆಂದರೆ, ಈ ಅಧಿಸೂಚನೆಯ ಪ್ರಕಾರ ಕೃಷಿಕರಿಗೆ ಅವರ ಮಾಲುಗಳ ಸಂಬಂಧ ದಲ್ಲಾಳಿಗಳು ಅಥವಾ ವ್ಯಾಪಾರಸ್ಥರು ನೀಡುವ ಪಾವತಿಗಳಿಗೆ ಮಾತ್ರ ಈ ಅಧಿಸೂಚನೆಯಡಿಯಲ್ಲಿ ವಿನಾಯತಿ ಇರುತ್ತದೆಯೆ ಹೊರತು ಇನ್ನಿತರೆ ಪಾವತಿಗಳಿಗೆ ಇರುವುದಿಲ್ಲ.

ಕೇಂದ್ರ ಸರ್ಕರವು ಮೇಲ್ಕಂಡ ಕಲಂಗೆ 2020ರ ವಿತ್ತೀಯ ಕಾಯ್ದೆಯ ಮೂಲಕ ದಿನಾಂಕ : 01–07–2020ರಿಂದ ಜಾರಿಗೆ ಬರುವಂತೆ ಕೆಲವು ಅಂಶಗಳನ್ನು ಸೇರ್ಪಡಿಸಿದ್ದು ಅವು ಕೆಳಕಾಣಿಸಿದಂತಿವೆ.

ಯಾವುದೇ ಒಬ್ಬ ವ್ಯಕ್ತಿಯು ಕಲಂ 139(1)ರ ಪ್ರಕಾರ ಕಳೆದ 3 ವರ್ಷಗಳಲ್ಲಿ ಸತತವಾಗಿ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ವ್ಯಕ್ತಿಗಳು ತನ್ನ ಖಾತೆಗಳಿಂದ ನಗದನ್ನು ಹಿಂಪಡೆಯುತ್ತಿದ್ದಲ್ಲಿ ಕೆಳಕಂಡಂತೆ ಮೂಲದಲ್ಲಿ ತೆರಿಗೆಯನ್ನು ಕಡಿತಮಾಡಲಾಗುತ್ತದೆ.

1. ನಗದು ಹಿಂಪಡೆತವು ವಾರ್ಷಿಕವಾಗಿ ರೂ 20 ಲಕ್ಷಕ್ಕಿಂತ ಹೆಚ್ಚು ಮತ್ತು ರೂ. 1 ಕೋಟಿಯವರೆಗೆ ಇದ್ದರೆ, ಶೇ.2ರಷ್ಟು
   ಅಥವಾ
2. ರೂ 1 ಕೋಟಿಗಿಂತ ಮೀರಿದರೆ, ಹೆಚ್ಚುವರಿ ಹಿಂಪಡೆತದ ಮೇಲೆ ಶೇ 5 ರಷ್ಟನ್ನು ಕಡಿತಮಾಡಲಾಗುತ್ತದೆ.

ಆದರೆ ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿದ ನಂತರ ಅಧಿಕೃತ ಗೆಜೆಟ್‌ನಲ್ಲಿನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಮಾಡುವ ಪಾವತಿಗಳಿಗೆ ಕಡಿಮೆ ದರದಲ್ಲಿ ಅಥವಾ ವಿನಾಯತಿ ನೀಡಬಹುದಾಗಿರುತ್ತದೆ.

| | | | | |
|---|---|---|---|---|
| **ಉದಾಹರಣೆಗೆ :** | | | | |
| **ಪಾವತಿಸುವವರು : ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು, ಅಂಚೆ ಕಛೇರಿಗಳು** | | | | |
| ಹಿಂಪಡೆಯುವರು/ ಸ್ವಿಕರಿಸುವವರು | | | | |
| **ರಾಮ – ಪ್ರತಿ ವರ್ಷ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸಿರುವವನು** | | | **ಕೃಷ್ಣ – ಕಳೆದ ಮೂರು ಸಾಲಿನಲ್ಲಿ ವರದಿಯನ್ನು ಸಲ್ಲಿಸದಿರುವನು – (FY 2019-20, 2018-19, 2017-18)** | |
| **ನಗದು ಹಿಂಪಡೆತ** | | | **ನಗದು ಹಿಂಪಡೆತ** | |
| ರೂ. 1 ಕೋಟಿ ಮೀರದಿದ್ದಲ್ಲಿ | ರೂ. 1 ಕೋಟಿ ಮೀರಿದಲ್ಲಿ | ರೂ. 20 ಲಕ್ಷ ಮೀರದಿದ್ದಲ್ಲಿ | ರೂ. 20 ಲಕ್ಷ ಮೀರಿದ್ದು 1 ಕೋಟಿ ಮೀರದಿದ್ದಲ್ಲಿ | ರೂ. 1 ಕೋಟಿ ಮೀರಿದಲ್ಲಿ |
| 0 % | ಶೇ 2 ರಷ್ಟು | 0 % | ಶೇ 2ರಷ್ಟು | ಶೇ 5 ರಷ್ಟು |

**ರಾಮನ ಹಿಂಪಡೆತಗಳು ಮತ್ತು ಟಿಡಿಎಸ್ ಮೊತ್ತಗಳು**

| ಕ್ರ.ಸಂ. | ನಗದು ಹಿಂಪಡೆತ | ಹೆಚ್ಚುವರಿ ಹಿಂಪಡೆತ | ಶೇಕಡ | ಟಿಡಿಎಸ್ ಮೊತ್ತ |
|---|---|---|---|---|
| 1 | 20,00,000 | 0 | 0 | 0 |
| 2 | 55,00,000 | 0 | 0 | 0 |
| 3 | 1,50,00,000 | 50,00,000 | 2 | 1,00,000 |

### ಕೃಷ್ಣನ ಹಿಂಪಡೆತಗಳು ಮತ್ತು ಟಿಡಿಎಸ್ ಮೊತ್ತಗಳು

| ಕ್ರ.ಸಂ. | ನಗದು ಹಿಂಪಡೆತ | ಹೆಚ್ಚುವರಿ ಹಿಂಪಡೆತ | ವಿವರಣೆ | ಶೇಕಡ | ಟಿಡಿಎಸ್ ಮೊತ್ತ | ಒಟ್ಟು ಟಿಡಿಎಸ್ |
|---|---|---|---|---|---|---|
| 1 | 20,00,000 | 0 | 0 | 0 | 0 | 0 |
| 2 | 55,00,000 | 35,00,000 | ಮೊದಲ 20 ಲಕ್ಷ | 0 | 0 | |
| | | | ನಂತರದ 35 ಲಕ್ಷ | 2 | 70,000 | 70,000 |
| 3 | 1,50,00,000 | 1,30,00,000 | ಮೊದಲ 20 ಲಕ್ಷ | 0 | 0 | |
| | | | ನಂತರದ 80 ಲಕ್ಷ | 2 | 1,60,000 | |
| | | | ನಂತರದ 50 ಲಕ್ಷ | 5 | 2,50,000 | 4,10,000 |

### ಗಮನಿಸಬೇಕಾದ ಅಂಶಗಳು

- ಇದು ದಿನಾಂಕ 01–09–2019ರಿಂದ ಜಾರಿಗೆ ಬಂದಿರುವುದಾದರೂ 2019–20ನೇ ವರ್ಷದ ಆರ್ಥಿಕ ವಹಿವಾಟು ಲೆಕ್ಕ ಹಾಕುವಾಗ ದಿನಾಂಕ 01–04–2019ರಿಂದ 31–08–2019ರವರೆಗಿನ ನಗದು ಹಿಂಪಡೆತವನ್ನೂ ಪರಿಗಣಿಸಲಾಗುತ್ತದೆ. 2018–19ನೇ ಸಾಲಿನಲ್ಲಿ ಈಗಾಗಲೇ ಒಂದು ಕೋಟಿ ರೂಗಳಿಗೂ ಹೆಚ್ಚು ನಗದು ಹಿಂಪಡೆತವಾಗಿದ್ದರೆ 01–09–2019ರ ನಂತರ ಹಿಂಪಡೆಯುವ ಎಲ್ಲ ಮೊತ್ತಗಳಿಗೂ ತೆರಿಗೆ ಕಡಿತ ಮಾಡಲಾಗುತ್ತದೆ.
- ಈಗ ಮಾಡಿರುವ ತಿದ್ದುಪಡಿಗಳು ದಿ: 01–07–2020ರಿಂದ ಜಾರಿಗೆ ಬರುವುದಾದರೂ ಲೆಕ್ಕಾಚಾರಗಳು ದಿ: 01–04– 2020ರಿಂದಲೇ ಆರಂಭವಾಗುತ್ತದೆ.
- ವ್ಯಕ್ತಿಯ ಪರಿಭಾಷೆಯಲ್ಲಿ ಸಹಕಾರ ಸಂಸ್ಥೆಗಳೂ ಸೇರಿರುತ್ತವೆ. ಈ ಎಲ್ಲ ಅಂಶಗಳೂ ಸಹಕಾರ ಸಂಸ್ಥೆಗಳಿಗೂ ಸಂಪೂರ್ಣವಾಗಿ ಅನ್ವಯವಾಗುವುದರಿಂದ ಸಹಕಾರ ಸಂಸ್ಥೆಗಳು ತಮ್ಮ ನಗದು ವ್ಯವಹಾರಗಳನ್ನು ಮಿತಿಗೊಳಿಸುವುದು ಉತ್ತಮ.
- ಇದು ಬ್ಯಾಂಕೇತರ ಎಲ್ಲ ಸಹಕಾರ ಸಂಸ್ಥೆಗಳಿಗೂ ಅನ್ವಯ
- ಸಹಕಾರ ಸಂಸ್ಥೆಗಳು ತಾವು ವ್ಯವಹರಿಸುವ ಸಹಕಾರೀ (ಡಿಸಿಸಿ) ಬ್ಯಾಂಕೂ ಸೇರಿದಂತೆ ಯಾವುದೇ ಬ್ಯಾಂಕಿನಿಂದ ಪಡೆಯುವ ಹಿಂಪಡೆತಗಳಿಗೆ ಅನ್ವಯ
- ನಗದು ಹಿಂಪಡೆತಗಳಿಗೆ ಮಾತ್ರ ಅನ್ವಯ
- ಬೇರರ್ ಚೆಕ್, ಕ್ರಾಸ್ ಮಾಡದ ಚೆಕ್, ಕೇವಲ ಕ್ರಾಸ್ ಮಾಡಿದ ಚೆಕ್, ಸೆಲ್ಫ್ ಚೆಕ್, ಇತ್ಯಾದಿಗಳ ಮೂಲಕ ಮಾಡಿದರೂ ತೊಂದರೆಯಾಗಬಹುದು.
- ಒಂದು ಬ್ಯಾಂಕಿನ ಎಲ್ಲ ಖಾತೆಗಳಿಂದ ಒಟ್ಟು ಹಿಂಪಡೆತ. ಒಂದು ಶಾಖೆ ಯಾ ಒಂದು ಖಾತೆ ಎಂಬುದಲ್ಲ
- ಒಂದು ಆರ್ಥಿಕ ವರ್ಷದಲ್ಲಿ ಪಡೆದ ಹಿಂಪಡೆತಗಳ ಮೊತ್ತ. ಒಂದು ದಿನ ಯಾ ಒಮ್ಮೆ ಎಂದಿಲ್ಲ
- ತೆರಿಗೆ ಕಡಿತದ ದರ 2% ಮತ್ತು (ವಿಶೇಷ ಸಂದರ್ಭಗಳಲ್ಲಿ) 5%
- ಒಂದು ಕೋಟಿ ಮೀರಿದ (ವಿಶೇಷ ಸಂದರ್ಭಗಳಲ್ಲಿ 20 ಲಕ್ಷ ಮೀರಿದ) ಮೊತ್ತಕ್ಕೆ ಮಾತ್ರ ಅನ್ವಯ
- ತೆರಿಗೆ ಕಡಿತದ ಪ್ರಮಾಣ ಪತ್ರ ನೀಡಲಾಗುವುದು. ತೆರಿಗೆ ಕಟಾವು ಮಾಡಿಕೊಂಡ ವ್ಯಕ್ತಿಯು ತನ್ನ ತೆರಿಗೆ ವರದಿ ಸಲ್ಲಿಸಿ ಈ ತೆರಿಗೆ ಮೊತ್ತವನ್ನು ಹಿಂಪಡೆಯಬಹುದು.

**– ಮಾಹಿತಿ ಸಂಗ್ರಹ ಮತ್ತು ಪ್ರಸ್ತುತಿ : ಸಿಎ॥ ವಿಜೇಂದ್ರಕಾಮತ್, ತೀರ್ಥಹಳ್ಳಿ**



**ಆರ್ಥಿಕ ಸ್ವಾತಂತ್ರ್ಯಕ್ಕೆ**
**ಸಹಕಾರವೇ ಹೆಬ್ಬಾಗಿಲು**
**– ಮಹಾತ್ಮ ಗಾಂಧೀಜಿ**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಸಹಕಾರ ಸಂಘಗಳ/ಸಹಕಾರ ಬ್ಯಾಂಕುಗಳ ಚುನಾವಣೆಯನ್ನು ಡಿಸೆಂಬರ್–2020ರವರೆಗೆ ಮುಂದೂಡುವ ಬಗ್ಗೆ ಹಾಗೂ ಸದರಿ ಆಡಳಿತಮಂಡಳಿಗಳ ಅವಧಿ ಮುಕ್ತಾಯಗೊಳ್ಳಲಿರುವ/ಮುಕ್ತಾಯಗೊಳ್ಳಲಿರುವ ಸಹಕಾರ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ : ಸಿಒ 32 ಸಿಎಲ್ಎಂ 2020. ದಿನಾಂಕ : 16–06–2020.

2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ ಆರ್‌ಎಸ್‌ಆರ್/ಎಕ್ಸ್‌ಎಂಸಿ/279/2019–20 ದಿನಾಂಕ : 13.07.2020

## ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ : 16–06–2020ರ ಸರ್ಕಾರದ ಆದೇಶದಲ್ಲಿ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿರುವ ಪ್ರಾಥಮಿಕ, ಮಾಧ್ಯಮಿಕ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ ಆಡಳಿತಮಂಡಳಿಯ ಪದಾವಧಿ ಮುಕ್ತಾಯಗೊಂಡಿರುವ ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳ/ಬ್ಯಾಂಕುಗಳ ಆಡಳಿತಮಂಡಳಿಗೆ ಚುನಾವಣೆ ನಡೆಸಲು ಹಾಗೂ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿನ ಸದಸ್ಯರ ಪ್ರಮಾಣವನ್ನು ಪರಿಗಣಿಸಿ, ಆಡಳಿತಮಂಡಳಿ ಪದಾವಧಿ ಮುಕ್ತಾಯಗೊಂಡಿರುವ/ಮುಕ್ತಾಯಗೊಳ್ಳಲಿರುವ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 121ರಡಿಯಲ್ಲಿ ಹಾಲಿ ಇರುವ ಆಡಳಿಮಂಡಳಿಯನ್ನು ಮುಂದಿನ ಆದೇಶದವರೆಗೆ ಅಥವಾ ಸೆಪ್ಟಂಬರ್ 30. 2020 ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಿ ಅದೇಶಿಸಲಾಗಿದೆ.

ಮೇಲೆ ಓದಲಾದ (2)ರ ನಿಬಂಧಕರ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್–19) ಸಾಂಕ್ರಾಮಿಕ ರೋಗವು ವ್ಯಾಪಕವಾ ಹರಡುತ್ತಿರುವ ಹಿನ್ನೆಲೆಯಲ್ಲಿ. ಎಲ್ಲಾ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ/ಒಕ್ಕೂಟಗಳ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ) ಚುನಾವಣೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಡಿಸೆಂಬರ್ 2020ರ ಅಂತ್ಯದವರೆಗೆ ಮುಂದೂಡಲು ಹಾಗೂ ಈಗಾಗಲೇ ಚುನಾವಣಾ ವೇಳಾ ಪಟ್ಟಿ (Calendar of events) ಹೊರಡಿಸಿ ಚುನಾವಣೆ ಪ್ರಕ್ರಿಯೆ ಬಾಕಿ ಇದ್ದಲ್ಲಿ ಅದನ್ನು ತಕ್ಷಣದಿಂದ ರದ್ದುಪಡಿಸುವುದು ಹಾಗೂ ಈಗಾಗಲೇ ಸಹಕಾರ ಸಂಘಗಳು/ ಸಹಕಾರ ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳ ಆಡಳಿತಮಂಡಳಿ ಅವಧಿ ಮುಕ್ತಾಯಗೊಂಡಿರುವ/ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಸಂಬಂಧಪಟ್ಟ ಸಕ್ಷಮ ನಿಬಂಧಕರುಗಳು (Jurisdictional Registrars) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ. 1959ರ ಕಲಂ 28(ಎ)(5) ರೀತ್ಯಾ ಆಡಳಿತಾಧಿಕಾರಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ. 1997ರ ಕಲಂ 38(ಎ)(1) ರೀತ್ಯಾ ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿಯ ವಿಶೇಷಾಧಿಕಾರಿ ನೇಮಕಾತಿಗೆ ಕ್ರಮವಿಡಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಅದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 32 ಸಿಎಲ್ಎಮ್ 2020, ಬೆಂಗಳೂರು, ದಿನಾಂಕ : 14–07–2020 ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶಿಸಿದೆ.

1. ಎಲ್ಲಾ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ ಚುನಾವಣೆಗಳನ್ನು (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟಗಳ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121ರಡಿಯಲ್ಲಿ ಸರ್ಕಾರಕ್ಕೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 39(ಎ) ಮತ್ತು 18(ಬಿ)ಗೆ ವಿನಾಯಿತಿ ನೀಡಿ, ತಕ್ಷಣದಿಂದ ಜಾರಿಗೆ ಬರುವಂತೆ ಡಿಸೆಂಬರ್ 2020ರ ಅಂತ್ಯದವರೆಗೆ ಮುಂದೂಡಲಾಗಿದೆ.
2. ಈಗಾಗಲೇ ಚುನಾವಣಾ ವೇಳಾ ಪಟ್ಟಿ (Calendar of events) ಹೊರಡಿಸಿ ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿದ್ದಲ್ಲಿ ಅದನ್ನು ಸಹ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.
3. ಈಗಾಗಲೇ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ ಆಡಳಿತಮಂಡಳಿ ಅವಧಿ ಮುಕ್ತಾಯಗೊಂಡಿರುವ/ಮುಕ್ತಾಯಗೊಳ್ಳಲಿರುವ ಸಹಕಾರ ಸಂಸ್ಥೆಗಳಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 28(ಎ)(5) ರೀತ್ಯಾ ಆಡಳಿತಾಧಿಕಾರಿಗಳನ್ನು ನೇಮಿಸಲು ಸಂಬಂಧಪಟ್ಟ ಸಕ್ಷಮ ನಿಬಂಧಕರುಗಳು (Jurisdictional Registrars) ಕ್ರಮವಿಡಲು ಆದೇಶಿಸಿದೆ.
4. ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ : ಸಿಒ 32 ಸಿಎಲ್ಎಮ್ 2020, ದಿನಾಂಕ : 16–6–2020ರಂತೆ ಮುಂದುವರೆಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/–

**ಕೆ.ಎಂ. ಆಶಾ**

**ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ**

**ಸರ್ಕಾರದ ಜಂಟಿ ಕಾರ್ಯದರ್ಶಿ**

**ಸಹಕಾರ ಇಲಾಖೆ**



# "ಸ್ವಾತಂತ್ರ್ಯೋತ್ಸವ–ಸರ್ವ ಭಾರತೀಯರ ರಾಷ್ಟ್ರೀಯ ಹಬ್ಬ"

▸▸ ಎನ್.ಆರ್.ಪಾಟೀಲ, ಹಿಂಡಲಗಾ, ಬೆಳಗಾವಿ ಜಿಲ್ಲೆ

**"ಅಗಸ್ಟ್ 15" ಪ್ರತಿವರ್ಷ ಬರುತ್ತಿದ್ದಂತೇ ಸರ್ವ ಭಾರತೀಯರ ಹೃದಯದಲ್ಲಿ ಸ್ವಾತಂತ್ರ್ಯ ದೇವಿಯ ಘಂಟೆ ಮೊಳಗುತ್ತದೆ.300 ವರ್ಷಗಳ ಆಂಗ್ಲರ ಆಡಳಿತಕ್ಕೆ ಅಂತ್ಯ ಹಾಡಿದ ಚರಿತ್ರಾರ್ಹ ದಿನವಿದು. ಪರಕಿಯರ ಆ ದಬ್ಬಾಳಿಕೆ ಮತ್ತು ನಮ್ಮದೇ ನೆಲದಲ್ಲಿ ನಾವೇ ಗುಲಾಮರಾಗಿದ್ದ ಆ ಅವಮಾನಗಳಿಗೆ ಮುಕ್ತಿ ನೀಡಿದ ಮಹಾ ಸುದಿನ. "ಅಗಸ್ಟ್ 15,1947" – ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥಹ ದಿನ. ಅಂದು ಆಂಗ್ಲರು ನಮಗೆ ಸ್ವಾತಂತ್ರ್ಯಕೊಟ್ಟು ಹೊರ ನಡೆದದ್ದು ಸರ್ವ ಭಾರತೀಯರ ಹೋರಾಟದ ಫಲ. ಬನ್ನಿ, ವರ್ಷಕ್ಕೊಮ್ಮೆಯಾದರೂ ಸ್ವಾತಂತ್ರ್ಯ ಹೋರಾಟವನ್ನು ಸ್ಮರಿಸುತ್ತ, ಈ ನಮ್ಮ ಸ್ವಾತಂತ್ರ್ಯಕ್ಕಾಗಿ ಬದುಕನ್ನೇ ಬಲಿದಾಗಿಸಿಕೊಂಡ ಆ ಸ್ವಾತಂತ್ರ್ಯ ಸೇನಾನಿ ಮಹನೀಯರನ್ನು ನೆನೆಯುತ್ತ ಭಾರತವನ್ನು ಪ್ರಗತಿ ಪಥದಲ್ಲಿ ಮುನ್ನಡೆಸೋಣ.**

### ಅಂದು ಆ ಹೋರಾಟ...

ಆಂಗ್ಲರ ದುರಾಡಳಿತಕ್ಕೆ ಅಂತ್ಯ ಹಾಡಲು ನೂರು ವರ್ಷಗಳಿಗೂ ಮೀರಿ ನಡೆದ ಭಾರತದ ಸ್ವಾತಂತ್ರ್ಯ ಹೋರಾಟ ಜಗತ್ತಿನ ಇತಿಹಾಸದಲ್ಲೇ ವೈಶಿಷ್ಟ್ಯಪೂರ್ಣವಾದುದು. ವ್ಯಾಪಾರಕ್ಕೆಂದು ಬಂದ ಆಂಗ್ಲರು ಇಲ್ಲಿಯ ಒಗ್ಗಟ್ಟಿಲ್ಲದ ಸಂಸ್ಥಾನಗಳ ವಿಷಮ ಪರಿಸ್ಥಿತಿಯನ್ನು ಅರಿತು ಖಡ್ಗ ಹಿಡಿದು ನಿಂತರು. 1757ರ ಪ್ಲಾಸಿ ಕದನದಲ್ಲಿ ಅವರಿಗಾದ ಜಯ ಭಾರತದಲ್ಲಿ ಆಂಗ್ಲ ಸಾಮ್ರಾಜ್ಯ ಸ್ಥಾಪನೆಯ ಅಡಿಗಲ್ಲಾಯಿತು. ಈ ವಿಜಯದಿಂದ ಬಂಗಾಲದಲ್ಲಿ ಬೇರು ಬಿಟ್ಟ ಬ್ರಿಟಿಷರು ಕ್ರಮವಾಗಿ ಭಾರತದ ಮೇಲೆ ಹಿಡಿತ ಸಾಧಿಸಿದರು. ಇಡೀ ಭಾರತವನ್ನೇ ಆಳುವ ಅರಸರಾದರು.

ಸ್ವಾತಂತ್ರ್ಯ ದೇವಿ ತನ್ನ ಸಂಕೋಲೆಯನ್ನು ಸಹಿಸಿಕೊಳ್ಳುವುದಾದರೂ ಎಷು ದಿನ? 1857ರ ಸಿಪಾಯಿ ದಂಗೆಯನ್ನು "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ" ಎಂದು ಕರೆದರೂ ಅದಕ್ಕಿಂತ ಮೊದಲು ದೇಶಾದ್ಯಂತ ನಡೆದ ಸಶಸ್ತ್ರ ಪ್ರತಿಭಟನೆಗಳು ಬ್ರಿಟಿಷರ ನಿದ್ದೆ ಕೆಡಿಸಿದ್ದವು. ಭಾರತದಲ್ಲೇ ಅಂಥ ಕಹಳೆ ಮೊಳಗಿಸಿದ ಮೊದಲ ದಿಟ್ಟ ಮಹಿಳೆ ಕರ್ನಾಟಕದ ಗಂಡುಮೆಟ್ಟಿನ ನೆಲ ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ಎಂದು ಹೇಳಲು ಹೆಮ್ಮೆ ಅನಿಸುತ್ತದೆ. ಆಂಗ್ಲ ಸೇನಾಪತಿಥ್ಯಾಕ್ರೆಯನ್ನು ಚೆಂಡಾಡಿದ ರಾಣಿ ಚೆನ್ನಮ್ಮಾ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸಂಚಲನ ಮೂಡಿಸಿದಳು. ಈ ಸಂದರ್ಭದಲ್ಲಿ ಚೆನ್ನಮ್ಮಳ ಆಪ್ತ ಸೇನಾನಿ ಸಂಗೊಳ್ಳಿ ರಾಯಣ್ಣನ ಹೆಸರೂ ಸ್ಮರಣೀಯ. ನಂತರ ಭರತ ಭೂಮಿಯ ಸ್ವಾತಂತ್ರ್ಯ ಹೋರಾಟದ ಆಶಾಕಿರಣವಾಗಿ 1885ರಲ್ಲಿ "ಭಾರತ ರಾಷ್ಟ್ರೀಯ ಕಾಂಗ್ರೆಸ್" ಅಸ್ತಿತ್ವಕ್ಕೆ ಬಂತು. ಲಾಲಾ



ಲಜಪತ್‌ರಾಯ, ಬಾಲಗಂಗಾಧರ ತಿಲಕ್, ಮೋತಿಲಾಲ್ ನೆಹರು, ಜವಾಹರಲಾಲ ನೆಹರೂ, ವಲ್ಲಭಭಾಯಿ ಪಟೇಲ್, ಸುಭಾಶಚಂದ್ರ ಬೋಸ್, ಭಗತ್ ಸಿಂಗ್, ಚಂದ್ರಶೇಖರ್ ಆಜಾದ್... ಹೀಗೆ ಅನೇಕ ನೇತಾರರು ಹೋರಾಟಕ್ಕಿಳಿದರು. ಕೆಲವರು ಹಿಂಸಾತ್ಮಕ ಮಾರ್ಗ ಹಿಡಿದರೆ ಮೋಹನದಾಸ್ ಕರಮ್‌ಚಂದ್ ಗಾಂಧಿ ಮತ್ತಿತರರು ಅಹಿಂಸಾತ್ಮಕ ಮಾರ್ಗ ಹಿಡಿದರು. ಈ ಎರಡೂ ಕಡೆಯಿಂದ ಪ್ರತಿಭಟನೆ ಎದುರಿಸತೊಡಗಿದ ಬ್ರಿಟಿಷರು ಆ ಹೋರಾಟವನ್ನು ಎದುರಿಸಲಾರದೇ ಕಂಗಾಲಾದರು. ಸ್ವಾತಂತ್ರ್ಯ ಹೋರಾಟ ದಿನದಿನಕ್ಕೆ ಕಾವೇರತೊಡಗಿತು. ಆಂಗ್ಲ ಸರಕಾರ ಸ್ವಾತಂತ್ರ್ಯ ಹೋರಾಟವನ್ನು ಬಗ್ಗು ಬಡಿಯಲು ಅನುಸರಿಸಿದ ದಬ್ಬಾಳಿಕೆಯ ಕ್ರೂರ ಮಾರ್ಗಗಳಿಗೆ ಸ್ವಾತಂತ್ರ್ಯ ಹೋರಾಟಗಾರರು ಬಗ್ಗಲಿಲ್ಲ. ಸ್ತ್ರೀ–ಪುರುಷರು ಸ್ವತಂತ್ರ ದೇವಿಗಾಗಿ ಪ್ರಾಣಾರ್ಪಣೆಗೂ ಸಿದ್ಧರಾದರು. ಅನೇಕ ವೀರರು ಜೈಲುಗಳಿಗೆ

ತಳ್ಳಲ್ಪಟ್ಟರು. ಅನೇಕ ನಾಯಕರು ತಮ್ಮ ಇಡೀ ಜೀವನವನ್ನು ಸ್ವಾತಂತ್ರ್ಯ ದೇವಿಯ ಚರಣಗಳಿಗೆ ಅರ್ಪಿಸಿದರು. ಸಹಸ್ರಾರು ದೇಶಭಕ್ತರು ಗಲ್ಲಿಗೇರಿದರು. ಆಂಗ್ಲರಿಗೆ ಸಿಂಹಸ್ವಪ್ನರಾಗಿದ್ದ ಭಗತ್‌ಸಿಂಗ್‌ರಿಗೆ ಗಲ್ಲುಶಿಕ್ಷೆ ಆಯಿತು. ಗಲ್ಲಿಗೇರಿಸುವ ಆ ದಿನ ಆ ವೀರನ ಮುಖದಲ್ಲಿ ಎಳ್ಳಷ್ಟೂ ಖಿನ್ನತೆ ಇರಲಿಲ್ಲ. ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನರ್ಪಿಸುತ್ತಿರುವ ಖುಷಿ ಇತ್ತು. ತನ್ನನ್ನು ಕಾಣಲು ಬಂದ ತಾಯಿಗೆ ಆ ವೀರ ಹೇಳಿದ – "ಅಮ್ಮಾ, ದುಃಖಿಸಬೇಡ. ನಾನು ಮತ್ತೇ ಹುಟ್ಟಿ ಬರುತ್ತೇನೆ. ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಶತ್ರುವಿನೊಡಡನೆ ಹೋರಾಡುತ್ತೇನೆ." ಎಂಥಹ ಯುವಶಕ್ತಿಯ ಸಾರ್ಥಕತೆ! ಎಂಥಹ ದೇಶಭಕ್ತಿಯ ಪರಾಕಾಷ್ಠತೆ !

ಆಂಗ್ಲ ಸರಕಾರ ಸ್ವಾತಂತ್ರ್ಯ ವೀರರ ಮುಂದೆ ಮಂಡಿಯೂರಿತು.. ಸ್ವಾತಂತ್ರ್ಯ ಸಂಗ್ರಾಮದ ಕಹಳೆಗಳ ಮುಂದೆ ಬ್ರಿಟಿಷ್ ಸರಕಾರ ತತ್ತರಿಸಿತು. ಸ್ವಾತಂತ್ರ್ಯ ಪ್ರೇಮಿಗಳ ಸಹನೆಯ ಕಟ್ಟೆಯೊಡೆಯಿತು. 1942ರ ಅಗಸ್ಟ್ 8 ರಂದು "ಭಾರತ ಬಿಟ್ಟು ತೊಲಗಿ", ಮಾಡು ಇಲ್ಲವೆ ಮಡಿ" ಚಳುವಳಿಗಳು ಆಂಗ್ಲರ ನಿದ್ದೆ ಕೆಡಿಸಿದವು. ಅದು ಜಗತ್ತು 2ನೇ ಮಹಾಯುದ್ಧದಲ್ಲಿ ಜರ್ಜರಿತವಾದ ಸಮಯ. ಯುದ್ಧದ ನಂತರ ಬ್ರಿಟನ್ನಿನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂತು. ಅದು ಭಾರತಕ್ಕೆ ಸ್ವಾತಂತ್ರ್ಯ ನೀಡುವುದರತ್ತ ಒಲವು ತೋರಿತು. ಆದರೆ, ಆ ವೇಳೆಗಾಗಲೇ ಭಾರತದಲ್ಲಿ ಒಂದು ವಿಚಿತ್ರ ಬೆಳವಣಿಗೆ ನಡೆದಿತ್ತು. ಮುಸ್ಲಿಂ ಲೀಗ್ ನಾಯಕ ಮಹಮ್ಮದ್ ಅಲಿ ಜಿನ್ನಾ ಮುಸ್ಲೀಮರದೇ ಆದ ಪ್ರತ್ಯೇಕ ದೇಶ ಬೇಕೆಂದು ಹಟ ಹಿಡಿದರು. ಒಡೆದು ಆಳುವ ನೀತಿಯ ಆಂಗ್ಲ ಸರಕಾರ ಭಾರತದ ವಿಭಜನೆಗೆ ಮನ್ನಿಸಿ, ಭಾರತ–ಪಾಕಿಸ್ತಾನಗಳೆರಡಕ್ಕೂ 1947ರ ಅಗಸ್ಟ್ 14ರ ಮಧ್ಯರಾತ್ರಿ ಸ್ವಾತಂತ್ರ್ಯಘೋಷಿಸಿತು.

**ಇಂದು – ಈ ಹೋರಾಟ...**

ಇಂದು ನಾವು ಆಚರಿಸುತ್ತಿರುವ ಸ್ವಾತಂತ್ರ್ಯೋತ್ಸವಕ್ಕೆ 73ನೆಯ ಪ್ರಬುದ್ಧತೆ. ಏಳು(7) ದಶಕಗಳು ಒಂದು ದೇಶದ ಸಮಗ್ರ ಬೆಳವಣಿಗೆಗೆ ಕಡಿಮೆ ಅವಧಿಯೇನೂ ಅಲ್ಲ. ಆದರೆ ನಿರೀಕ್ಷಿತ ತೃಪ್ತಿದಾಯಕ ಬೆಳವಣಿಗೆ ಆಗಲಿಲ್ಲ ಎಂಬ ಕೂಗು ಅಂದು ಇಂದಿಗೂ ಕೇಳಿ ಬರುತ್ತಿದೆ. ಚುನಾಯಿತ ಸರಕಾರಗಳ ಮೇಲೆ ಜನತೆ ಇಟ್ಟುಕೊಂಡ ಭರವಸೆಗಳು ಹುಸಿಯಾಗುತ್ತಲೇ ಇದಕ್ಕೆ ಮೂಲ ಕಾರಣ. ಜನರಿಗೆ





ಹಲವಾರು ಭರವಸೆಗಳನ್ನು ನೀಡಿ ಆರಿಸಿ ಬಂದ ಜನತಾ ಪ್ರತಿನಿಧಿಗಳು ತಮ್ಮ ಆಯ್ಕೆಯಲ್ಲಿ ತೋರುವ ಕಾಳಜಿಯನ್ನು ದೇಶೋದ್ಧಾರದಲ್ಲಿ, ಜನತಾ ಸೇವೆಯಲ್ಲಿ ತೋರುವುದಿಲ್ಲ ಎಂಬ ಮಾತುಗಳು ಈಗಲೂ ಸಾಮಾನ್ಯ. ಜನರಿಂದ ಆರಿಸಲ್ಪಡುವ ಪ್ರತಿನಿಧಿಗಳು ತಾವು "ಜನತಾ ಸೇವಕರು" ಎಂಬುದನ್ನು ಮರೆತು ವರ್ತಿಸುತ್ತಿರುವುದೇ ಈ ದೇಶದ ಹಿನ್ನಡೆಗೆ ಕಾರಣ ಎಂಬ ಮಾತುಗಳೂ ಇವೆ. ಅಧಿಕಾರದ ಚುಕ್ಕಾಣಿ ಹಿಡಿದಯಾವುದೇ ಸರಕಾರಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ ಬಹುತೇಕ ಘೋಷಣೆಗಳನ್ನು ಅಧಿಕಾರಕ್ಕೆ ಬಂದ ಮೇಲೆ ಮರೆತೇ ಬಿಡುತ್ತವೆ ಎನ್ನುತ್ತಾರೆ ರಾಜಕೀಯ ವಿಮರ್ಶಕರು. ದಕ್ಷ ಅಧಿಕಾರಿಗಳ ಆತ್ಮಹತ್ಯೆ, ರೈತರ ಸಾವುಗಳು, ಜನಪ್ರತಿನಿಧಿಗಳ ಹೆಸರಲ್ಲೇ ಕೇಳಿ ಬರುತ್ತಿರುವ ಭ್ರಷ್ಟಾಚಾರದ ಪ್ರಕರಣಗಳು, ಜನತಾ ಪ್ರತಿನಿಧಿಗಳು ಜನತಾ ಜನಾರ್ಧನರೊಂದಿಗೆ ನಡೆದು ಕೊಳ್ಳುವ ಪರಿ..... ಇವೆಲ್ಲವುಗಳನ್ನು ನೋಡಿದಾಗ "ಯಾರಿಗೆ ಬಂತು ಸ್ವಾತಂತ್ರ್ಯ ?" ಎಂದು ಪ್ರಜೆಗಳು ಕೇಳುತ್ತಿರುವದರಲ್ಲಿ ಅರ್ಥವಿದೆ ಅನಿಸುತ್ತದೆ.

ಏನಾಯಿತು ನಮ್ಮ ಪ್ರಜಾ ಪ್ರಭುತ್ವಕ್ಕೆ ? ನಾವು ಹೀಗೇಕಾದೇವು ? ದೇಶ ಸ್ವಾತಂತ್ರ್ಯ ಗಳಿಸುವಾಗ ಇದ್ದ ನಾಯಕರ ಪ್ರಾಮಾಣಿಕತೆ ಹಾಗೂ ಜನರ ಉತ್ಸಾಹ ಸ್ವಾತಂತ್ರ್ಯ ಗಳಿಸಿದ ಮೇಲೆ ಉಳಿಯಲಿಲ್ಲ ಯಾಕೆ ? ಸ್ವತಂತ್ರ ಭಾರತದ ಎರಡನೇ ಪ್ರಧಾನಿ ಲಾಲ್ ಬಹದ್ದೂರ ಶಾಸ್ತ್ರಿ ಅವರು ನೆಹರೂ ಅವರ ಮಂತ್ರಿ ಮಂಡಳದಲ್ಲಿ ರೇಲ್ವೇ ಮಂತ್ರಿಯಾಗಿದ್ದಾಗ ಒಂದು ಸಾರಿರೈಲು ಅಪಘಾತಕ್ಕೊಳಗಾದಾಗ ತಕ್ಷಣ ತಪ್ಪನ್ನು ಒಪ್ಪಿಕೊಂಡು ರಾಜೀನಾಮೆ ಸಲ್ಲಿಸಿ ಜನತೆಗೆ ಆದ ತೊಂದರೆಗೆ ಕ್ಷಮಾ ಕೋರಿದ್ದರು. ಈಗ ಇಂಥಹ ಸಚಿವರು ಎಲ್ಲಿ? ಲಾಲಬಹದ್ದೂರ ಶಾಸ್ತ್ರಿಗಳು ಪ್ರಧಾನಿ ಆಗಿದ್ದಾಗ ಅವರ ಮನೆಗೆ ನೆಂಟರೊಬ್ಬರು ಬಂದು ಹಣ ಸಹಾಯ ಕೇಳಿದರಂತೆ. ದೇಶದ ಪ್ರಧಾನಮಂತ್ರಿಯ ಹತ್ತಿರ ಹಣಕ್ಕೇನು ಕೊರತೆ ಎಂಬುದು ಆ ನೆಂಟನ ಅನಿಸಿಕೆ. ನಿಜಕ್ಕೂ ಈ ಪ್ರಧಾನಿಯ ಬಳಿ ಹಣ ಇರಲಿಲ್ಲ. ಮೌನವಾದರು. ಆಗ ಅವರ ಪತ್ನಿ ಒಂದಿಷ್ಟು ಹಣ ತಂದು ಅವರ ಕೈಗೆ ನೀಡಿದರು. ಹಣ ತೆಗೆದುಕೊಂಡು ನೆಂಟನು ಹೋದ ಮೇಲೆ ಲಾಲಬಹದ್ದೂರ್ ಶಾಸ್ತ್ರಿಯವರು ಹೆಂಡತಿಯನ್ನು" ಈ ಹಣ ಎಲ್ಲಿಂದ ಬಂತು ?" ಎಂದು ಕೇಳಿದಾಗ "ಮನೆ ಖರ್ಚಿಗೆ ನೀವು ಕೊಟ್ಟ



ಹಣದಲ್ಲೇ ಉಳಿಸಿದ್ದು" ಎಂದು ಆ ಸಾಧ್ವಿ ಹೇಳಿದ್ದೇ ತಡ ಶಾಸ್ತ್ರಿಯವರು ಹಣಕಾಸಿನ ಇಲಾಖೆಗೆ ಪತ್ರ ಬರೆದು" ನನ್ನ ಸಂಬಳದಲ್ಲಿ ಇಷ್ಟು ಹಣ ಹೆಚ್ಚು ಆಗುತ್ತಿದೆ. ಅಷ್ಟನ್ನು ಸಂಬಳದಲ್ಲಿ ಕಡಿಮೆ ಮಾಡಿ!!" ಆದರೆ ಇಂದು? ಇಲ್ಲದ ಮಕ್ಕಳಿಗೆ ಕ್ಯಾನ್ಸರ್ ಆಗಿದೆ ಎಂದು ಹೇಳಿ ಸರಕಾರ ದಿಂದ ಹಣ ಲಪಟಾಯಿಸುವ ಪ್ರತಿನಿಧಿಗಳಿದ್ದಾರೆ. ಊರಲ್ಲಿ ನಿರ್ಮಾಣವಾಗದೇ ಇರುವಕೆರೆಗೆ ಕೋಟಿ ಕೋಟಿ ಹಣ ಕಬಳಿಸಿದವರಿದ್ದಾರೆ. ಅವರು ಮಾಡುತ್ತಿರುವ ಕರ್ಮಗಳ ಫಲವನ್ನು ಪ್ರಜೆಗಳು ಅನುಭವಿಸಬೇಕು. ಅಂದಾಗದೇಶದ ಸ್ವಾತಂತ್ರ್ಯಕ್ಕೇನು ಅರ್ಥ ?

ಸ್ವಾತಂತ್ರ್ಯೋತ್ಸವದ ಈ ದಿನ ಒಕ್ಕೂಟ ರಾಜ್ಯಗಳ ಸಂಬಂಧಗಳ ಬಗೆಗೆ ಹೇಳಲೇಬೇಕು. ಕುಡಿಯುವ ನೀರಿಗಾಗಿ ಕಳಸಾ–ಬಂಡೂರಿ ನಾಲೆಗಾಗಿ ನಡೆಯುತ್ತಿರುವ ಹೋರಾಟ ಆರಂಭವಾಗಿ ವರ್ಷಗಳೇ ಕಳೆದು ಹೋದವು. ನಮ್ಮಲ್ಲೇ ಹುಟ್ಟಿ ಹರಿಯುವ ಮುಂದೆ ಗೋವಾದ ಮಹದಾಯಿ ನದಿಯನ್ನು ಸೇರುವ ಕಳಸಾ ಹಳ್ಳದ ನೀರನ್ನು ಕುಡಿಯಲು ಉಪಯೋಗಿಸಿಕೊಳ್ಳುತ್ತವೆ ಎಂದರೆ ನೆರೆ ರಾಜ್ಯ ತಕರಾರು ಸಲ್ಲಿಸುತ್ತಿರುವುದು ಬಾಲಿಶತನ ಅಲ್ಲವೇ? ಅಷ್ಟಕ್ಕೂ ವರ್ಷಗಳುದ್ದಕ್ಕೂ ನಡೆಯುತ್ತಿರುವ ಈ ಹೋರಾಟದಲ್ಲಿ ಎಷ್ಟು ಜನ ಪ್ರತಿನಿಧಿಗಳು ಭಾಗವಹಿಸಿದ್ದರು? ನಮ್ಮಲ್ಲೇ ಇರುವ ಮೇಕೆದಾಟುವಿಗೆ ಕಟ್ಟೆಕಟ್ಟುತ್ತೇವೆ ಎಂದಾಗ ಸಿಡಿದು ಬೀಳುವ ತಮಿಳುನಾಡು, ನಮ್ಮ ಕೊಡಗಿನ ಕಾವೇರಿ ನದಿ ನೀರಿಗಾಗಿ ಸದಾ ತಕರಾರು ಸಲ್ಲಿಸುವ ತಮಿಳುನಾಡು, ಕೃಷ್ಣಾ ನದಿ ನೀರಿಗಾಗಿ ಹೋರಾಟಕ್ಕಿಳಿಯುವ ಆಂಧ್ರಪ್ರದೇಶಗಳ ವರ್ತನೆ ನೋಡಿದರೆ ಭಾರತದಲ್ಲಿಂದು ರಾಜ್ಯಗಳು ರಾಜ್ಯಗಳಾಗಿ ಉಳಿಯದೇ ಪ್ರತ್ಯೇಕ ದೇಶಗಳಾಗಿ ಬೆಳೆದಿವೆ ಎಂದೆನಿಸದಿರಲಾರದು. ಇದನ್ನು ಕೇಂದ್ರ–ರಾಜ್ಯ ಸರಕಾರಗಳು ಗಂಭೀರವಾಗಿ ಗಮನಿಸಬೇಕು ಸೌಹಾರ್ದಯುತವಾಗಿ ಇರಬೇಕು.

### ಮನದ ಮಾತು...

ಅಗಸ್ಟ್15ರಂದು ಪ್ರತಿ ವರ್ಷ ದೇಶಾದ್ಯಂತ ಅತ್ಯಂತ ಸಂಭ್ರಮ – ಸಡಗರದಿಂದ ಆಚರಿಸುವ ಸ್ವಾತಂತ್ರ್ಯೋತ್ಸವ ನಮ್ಮ ರಾಷ್ಟ್ರೀಯ ಹಬ್ಬ. ಇದು ಆಚರಿಸಲೇ ಬೇಕಾದ ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ. ಇದು ನಮ್ಮ ಭವ್ಯ ಭಾರತಕ್ಕೆ ಭಾರತೀಯರು ಸಲ್ಲಿಸುವ ಗೌರವ. 100 ವರ್ಷಗಳ ಕಾಲ ನಿರಂತರ ನಡೆದ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಬದುಕನ್ನೇ ಬಲಿದಾನ ಮಾಡಿದ ಆ ಮಹಾಮಾನವರ ಸ್ಮರಣೆಯೇ ನಮಗೆ ದೇಶ ಕಟ್ಟುವಲ್ಲಿ ಚಿರಸ್ಫೂರ್ತಿ ಆಗಬೇಕು. ನಾವು ಸ್ವತಂತ್ರ ಭಾರತದ ಪ್ರಜಾಪ್ರಭುತ್ವದ ಅನಭಿಕ್ಷಿತ ಪ್ರಭುಗಳು. ನಮ್ಮ ಮೇಲೆ ರಾಷ್ಟ್ರ ಕಟ್ಟುವ ಹೆಚ್ಚಿನ ಜವಾದ್ದಾರಿಗಳಿವೆ. ಭಾರತಾಂಬೆಯ ಮಕ್ಕಳಾದ ನಾವು ಅವಳ ಉದ್ಧಾರಕ್ಕಾಗಿಯೇ ಶ್ರಮಿಸುವುದು ನಮ್ಮ ಕರ್ತವ್ಯ. ಈ ವಿಷಯದಲ್ಲಿ ನಾವು ಸ್ವಾರ್ಥರಾದರೆ, ಭ್ರಷ್ಟಾಚಾರಿಗಳಾದರೆ ಅದು ನಾವು ಮಾಡಿದ ಮಾತೃದ್ರೋಹ ಆಗುತ್ತದೆ. ನಾವೆಲ್ಲ ಭಾರತ ಮಾತೆಯ ಮಕ್ಕಳು. ಅವಳ ಸೇವೆಯ ಪವಿತ್ರ ಕಾರ್ಯಕ್ಕೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವುದರಲ್ಲೇ ನಮ್ಮ ಹಿತವಿದೆ; ತಾಯಿಯ ಉಧ್ಧಾರವಿದೆ. ಅನೇಕ ಶತಮಾನಗಳ ನಮ್ಮ ಸ್ವಾತಂತ್ರ್ಯ ಸಂಘರ್ಷ ಇಂದು ಯಶಸ್ವಿನ ಒಂದು ಘಟ್ಟ ಮುಟ್ಟಿದೆ. ಬನ್ನಿ, ನಿಸ್ವಾರ್ಥ ರಾಷ್ಟ್ರ ಸೇವೆಯನ್ನು ನಮ್ಮ ಉಸಿರಾಗಿಸಿಕೊಳ್ಳೋಣ. ದೇಶವನ್ನು ಮುಂದುವರೆದ ದೇಶಗಳಲ್ಲೇ ಪ್ರಥಮವಾಗಿಸೋಣ.





# ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿ ಜವಾಬ್ದಾರಿ, ನಡವಳಿಕೆ ದಾಖಲಿಸುವ ರೀತಿ ನೀತಿಗಳು

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು.

97ನೇ ಸಂವಿಧಾನ ತಿದ್ದುಪಡಿಯ ಆಶಯ ಸಹಕಾರ ಸಂಘಗಳು 'ಸದಸ್ಯ ಚಾಲಿತ' ಸಹಕಾರ ಸಂಘಗಳಾಗಿ ರೂಪುಗೊಳ್ಳಬೇಕು. ಚುನಾಯಿತ ಆಡಳಿತ ಮಂಡಳಿ ಸದಸ್ಯರಿಗೆ ಹೊಣೆಗಾರರಾಗಿರಬೇಕು. ಚುನಾಯಿತ ಆಡಳಿತ ಮಂಡಳಿಗೆ ಆಡಳಿತದಲ್ಲಿರುವ ಸ್ವಾತಂತ್ರ್ಯದ ಜೊತೆಗೆ ಜವಾಬ್ದಾರಿಯೂ ನಿಗಧಿಯಾಗಿದೆ. ಸಾಮಾನ್ಯ ಸಭೆಯಲ್ಲಿ ಆಡಳಿತ ಮಂಡಳಿಗೆ ನೀತಿ ಸಂಹಿತೆ ರಚಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ನಿರ್ದೇಶಕರ ನೆಂಟರಿಷ್ಟರ ನೇಮಕಾತಿ, ಅವರು ಪಡೆದಿರುವ ಪ್ರವಾಸ ಭತ್ಯೆ, ದಿನ ಭತ್ಯೆ, ಸಭೆಗಳಲ್ಲಿ ಭಾಗವಹಿಸಿರುವ ಬಗ್ಗೆ ಪರಾಮರ್ಶೆ (ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಲಂ 27) ಅಲ್ಲದೆ, ನಿರ್ದೇಶಕರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ದಿಷ್ಟ ಪಡಿಸಿ ವಿವರಿಸಲಾಗಿದೆ. (ಕ.ರಾ.ಸ.ಸಂ ಕಲಂ 28ಸಿ). ಇದರೊಡನೆ ಆಡಳಿತ ಮಂಡಳಿ ಸಭೆ ನಡೆಸಬೇಕಾದ ವಿಧಿವಿಧಾನಗಳನ್ನು ವಿವರಿಸಲಾಗಿದೆ. (ಕ.ರಾ.ಸ.ಸಂ. ನಿಯಮ 14ಎ.ಕೆ). ಆದರೆ ಅನೇಕ ಸಹಕಾರ ಸಂಘಗಳಲ್ಲಿ ಇವುಗಳ ಪಾಲನೆ ಆಗುತ್ತಿದೆಯೇ? ಆಗುತ್ತಿದ್ದರೆ ಎಷ್ಟು ಸಹಕಾರ ಸಂಘಗಳಲ್ಲಿ ಆಗುತ್ತಿದೆ. ಅದರಲ್ಲಿಯೂ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಇದರ ಅರಿವು ಇಲ್ಲದೇ ಇರುವುದು ಗೋಚರವಾಗುತ್ತಿದೆ. ಇದೇ ಕಾರಣಕ್ಕೆ ಆಡಳಿತ ಮಂಡಳಿಗೂ, ಸಿಬ್ಬಂದಿಗೂ ಜಿಜ್ಞಾಸೆಗಳು, ಬಿನ್ನಾಭಿಪ್ರಾಯಗಳು ಉಂಟಾಗಲು, ಘರ್ಷಣೆಗಳು ಉಂಟಾಗಲು ಕಾರಣವಾಗಿರುತ್ತದೆ. ಇದರಿಂದ ಸಹಕಾರ ಸಂಘದ ಆಡಳಿತದ ಮೇಲೆ ಅದರ ಚಟುವಟಿಗಳ ಮೇಲೆ ದುಷ್ಪರಿಣಾಮ ಬೀರುತ್ತಲಿದೆ. ಸಹಕಾರ ಸಂಘದಅಭಿವೃದ್ಧಿ ಆಡಳಿತದ ಜವಾಬ್ದಾರಿ, ಚುನಾಯಿತ ಆಡಳಿತ ಮಂಡಳಿಯದಾಗಿರುವುದರಿಂದ ಸಭೆ ನಡೆಸುವ ನಿರ್ಧಾರಗಳನ್ನು ಕೈಗೊಳ್ಳುವ ಜವಾಬ್ದಾರಿ ಅವರದಾಗಿದ್ದು ಕೆಲವು ರೀತಿ, ರಿವಾಜುಗಳು, ನಿಯಮಗಳ ಪಾಲನೆ, ಪೋಷಣೆ ಅವರದಾಗಿರುತ್ತದೆ.

ಆಡಳಿತ ಮಂಡಳಿ ಸಭೆ ನಡೆಸಬೇಕಾದ ವಿಧಿವಿಧಾನಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಕೆ ಯಲ್ಲಿ ಸವಿವರವಾಗಿ ವಿವರಿಸಲಾಗಿದೆ. ಉಪನಿಯಮಗಳಲ್ಲಿ ಇದರ ಬಗ್ಗೆ ವಿವರಗಳಿದ್ದು, ಅನೇಕ ಬಾರಿ ಉಪನಿಯಮಗಳಲ್ಲಿನ ಅಂಶಗಳಿಗೂ ನಿಯಮಗಳಿಲ್ಲಿನ ಅಂಶಗಳಿಗೂ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಅಂತಹ ಸಂದರ್ಭದಲ್ಲಿ ನಿಯಮಗಳಡಿಯಲ್ಲಿ ತಿಳಿಸಿರುವ ಅಂಶಗಳು ಮೇಲ್ಪಂಕ್ತಿಯನ್ನು ಪಡೆಯತ್ತವೆ. ಉಪನಿಯಮಗಳು ಕಾಯ್ದೆ ಮತ್ತು ನಿಯಮಗಳಿಗನುಸಾರವಿರತಕ್ಕದ್ದು. ಈ ನಿಯಮದಲ್ಲಿನ ಕೆಳಕಂಡ ಅಂಶಗಳ ಪಾಲನೆ ಅಗತ್ಯ. ಅಲ್ಲದೆ ಉಪನಿಯಮಗಳಿದ್ದಲ್ಲಿ ಅದನ್ನೂ ಪಾಲಿಸಬೇಕಾಗತ್ತದೆ.

1) 28ಸಿಯಡಿಯಲ್ಲಿ ವಿವರಿಸಿರುವ ನಿಯಮ ಮತ್ತು ಉಪನಿಯಮಗಳಲ್ಲಿ ವ್ಯವಹಾರಿಕ ವಿಷಯಗಳ ಬಗ್ಗೆ ವ್ಯವಹರಿಸಲು ಅಗತ್ಯತೆಗನುಸಾರ ಸಭೆ ಸೇರತಕ್ಕದ್ದು. ಏನೇ ಆದರೂ ಎರಡು ಸಭೆಗಳಲ್ಲಿನ ಅಂತರ ಮೂರು ತಿಂಗಳಿಗೆ ಮೀರಬಾರದು.

2) (ಅ) ಮುಖ್ಯ ಕಾರ್ಯನಿರ್ವಾಹಕರು ಅಧ್ಯಕ್ಷರೊಡನೆ ಸಮಾಲೋಚಿಸಿ (ಸಲಹೆ ಪಡೆದು) ಸಭೆ ಕರೆಯುವುದು. ತಿಳುವಳಿಕೆ ಪತ್ರವು ಸ್ಪಷ್ಟ ಏಳುದಿನಗಳ ಕನಿಷ್ಠ ಅಂತರ ಹೊಂದಿರತಕ್ಕದ್ದು. ತುರ್ತು ಸಂದರ್ಭಗಳಲ್ಲಿ ಮೂರುದಿನಗಳ ಅಂತರದಲ್ಲಿ ಕರೆಯಬಹುದು.

(ಆ) ತಿಳುವಳಿಕೆ ಪತ್ರವನ್ನು ವೇಗ ಅಂಚೆ, ಕೊರಿಯರ್, ಸ್ಥಳೀಯ ರವಾನೆ(ಸ್ವೀಕೃತಿಯೊಡನೆ) ರವಾನಿಸ ಬಹುದಾಗಿದೆ.

3) ತಿಳುವಳಿಕೆ ಪತ್ರವು ಸ್ಥಳ, ದಿನಾಂಕ, ಸಮಯಕಾರ್ಯಸೂಚಿಯನ್ನು ಒಳಗೊಂಡಿರಬೇಕು. ಸ್ಥಳ ಸಂಘದ ಕಛೇರಿಯೇ ಆಗಿರತಕ್ಕದ್ದು. (ಕ.ರಾ.ಸ.ಸಂ ಕಾಯ್ದೆ ಕಲಂ113) ತಿಳುವಳಿಕೆ ಪತ್ರದೊಡನೆ ಮುಖ್ಯಕಾರ್ಯ ನಿರ್ವಾಹಕರು ವಿಷಯದ ಆಗುಹೋಗುಗಳ ಬಗ್ಗೆ (ಪರಿಣಾಮಗಳ ಬಗ್ಗೆ) ಕಾಯ್ದೆಯಾತ್ಮಕ ಅಂಶಗಳಲ್ಲಿದಲ್ಲಿ ಅವುಗಳ ಬಗ್ಗೆ, ಆರ್ಥಿಕ ಪರಿಣಾಮಗಳ ಬಗ್ಗೆ ವಿಷಯಾವಾರು ವಿವರವಾದ ಟಿಪ್ಪಣಿಯನ್ನು ಕಳುಹಿಸತಕ್ಕದ್ದು.

4) ಸಭೆಗೆ ಕನಿಷ್ಠ ಕಡ್ಡಾಯ ಹಾಜರಾತಿ ಸಂಖ್ಯೆ (ಕೋರಂ) ಒಟ್ಟಾರೆ ಆಡಳಿತ ಮಂಡಳಿ ಸದಸ್ಯ ಸಂಖ್ಯೆಯ ಶೇಕಡಾ 50 ಮತ್ತು ಒಂದು ಅಧಿಕ ಸಂಖ್ಯೆಯಾಗಿರುತ್ತದೆ. ಸಭೆ ಆರಂಭಕ್ಕೆ ಮುನ್ನ ಹಾಜರಾದ ಸದಸ್ಯರು ಆ ಉದ್ದೇಶಕ್ಕಾಗಿ ಇರಿಸಿರುವ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು. ಯಾವುದೇ ಸಭೆಯಲ್ಲಿ ಕೋರಂ ಇಲ್ಲದೇ ಸಭಾ ವ್ಯವಹಾರಗಳು ನಡೆಯುವಂತಿಲ್ಲ.

5) ಸಭೆ ಆರಂಭಕ್ಕೆ ಮುನ್ನ ಕೋರಂ ಅವಶ್ಯಕ.

6) ಸಭೆ ಕರೆದ ಒಂದು ಗಂಟೆಯೊಳಗೆ ಕೋರಂ ಆಗದಿದ್ದಲ್ಲಿ ಆ ಸಭೆಯನ್ನು ಮುಂದೂಡುವುದು.

7) ಆಡಳಿತ ಮಂಡಳಿ ಸದಸ್ಯರ ಕೋರಿಕೆ ಮೇರೆಗೆ ಸಭೆ ಕರೆದಿದ್ದಲ್ಲಿ ಕೋರಂ ಆಗದಿದ್ದಲ್ಲಿ ಅದನ್ನು ರದ್ದುಗೊಳಿಸುವುದು.

8) ಸಭೆ ನಡೆಯುವ ಸಂದರ್ಭದಲ್ಲಿ ಯಾವುದೇ ವಿಷಯ ವ್ಯವಹರಿಸಲ್ಪಡುತ್ತಿದ್ದಲ್ಲಿ ಕೋರಂ ಕೊರತೆ ಉಂಟಾದಲ್ಲಿ ಆ ವಿಷಯದಲ್ಲಿ ವ್ಯವಹರಿಸತಕ್ಕದ್ದಲ್ಲ. ಆ ವಿಷಯವನ್ನು ಮುಂದೂಡಿದ ಸಭೆಯಲ್ಲಿ ವ್ಯವಹಾರಕ್ಕೆ ತೆಗೆದುಕೊಳ್ಳತಕ್ಕದ್ದು.

9) ಮುಂದೂಡಿದ ಸಭೆಯನ್ನು ಆ ದಿನವೇ ನಡೆಸಬಹುದು. ಅಥವಾ ಮುಂದೂಡಿದ ದಿನಾಂಕದಿಂದ ಏಳು ದಿನಗಳ ಒಳಗೆ

ಸಭೆ ನಡೆಸತಕ್ಕದ್ದು. ಮುಂದೂಡಿದ ಸಭೆಯಲ್ಲಿ ಪಟ್ಟಿ ಮಾಡಿದ ವಿಷಯಗಳನ್ನು (ಹಿಂದಿನ ಸಭೆಗಾಗಿ) ಮಾತ್ರ ತೆಗೆದುಕೊಳ್ಳತಕ್ಕದ್ದು ಮತ್ತು ನಿರ್ಧಾರ ತೆಗೆದುಕೊಳ್ಳತಕ್ಕದ್ದು. ವಿಷಯಗಳ ಪರಿಗಣನೆಗೆ ಮುಂದೂಡಿದ ಸಭೆಯಲ್ಲಿಯೂ ಕೋರಂ ಇರತಕ್ಕದ್ದು.

10) ಕೋರಂ ಇಲ್ಲದೆ ಮುಂದೂಡಿದ ವಿಷಯಗಳನ್ನು ಮುಂದಿನ ಸಭೆಗಳಲ್ಲಿ ಮಂಡಿಸಿ ಕೋರಂ ಇರುವಾಗಲೇ ನಿರ್ಣಯಿಸತಕ್ಕದ್ದು.

11) ಯಾವುದೇ ನಿರ್ಧಾರವನ್ನು ಸರಳ ಬಹುಮತದ ಮೇಲೆ ನಿರ್ಣಯಿಸುವುದು. ಸಮಮತವಿದ್ದಾಗ ಸಭಾಧ್ಯಕ್ಷರು ಒಂದು ನಿರ್ಣಾಯಕ ಮತ ಚಲಾಯಿಸಲು ಹಕ್ಕು ಹೊಂದಿರುತ್ತಾರೆ (ಚುನಾವಣೆ ವಿಷಯ ಹೊರತುಪಡಿಸಿ)

12) ಮುಖ್ಯಕಾರ್ಯನಿರ್ವಾಹಕರು ನಡುವಳಿಕೆ ದಾಖಲಿಸಲು ಪುಟ ಸಂಖ್ಯೆ ನಮೂದಿಸಿ ಇರಿಸಿರುವ ಪುಸ್ತಕದಲ್ಲಿ ಸತ್ಯವಾಗಿ ಮತ್ತು ನಿಖರವಾಗಿ ದಾಖಲಿಸಬೇಕು. ಯಾವುದೇ ಸದಸ್ಯರು ತಮ್ಮ ಅಸಮ್ಮತಿ ಸೂಚಿಸಿದಲ್ಲಿ ಸತ್ಯವಾಗಿ ಮತ್ತು ನಿಖರವಾಗಿಅದನ್ನು ಮುಖ್ಯಕಾರ್ಯನಿರ್ವಾಹಕರು ದಾಖಲಿಸಬೇಕು. ಸಭೆ ನಡವಳಿಕೆಗಳು ಅಲ್ಲಿ ನಡೆದ ನಡವಳಿಕೆಗಳ ನ್ಯಾಯಯುತ ಮತ್ತು ಸರಿಯಾದ ತಾತ್ಪರ್ಯ ಹೊಂದಿದ ನಡುವಳಿಕೆಗಳಾಗಿರಬೇಕು.

13) ಪ್ರತಿ ಸಭೆ ನಡವಳಿಕೆಗಳಿಗೂ ಸಭಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡತಕ್ಕದ್ದು.

14) ಮುಖ್ಯಕಾರ್ಯನಿರ್ವಾಹಕರು ದೃಢೀಕರಿಸಿದ ನಡವಳಿಕೆ ಪ್ರತಿಯನ್ನು ಸಭೆ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ನಿಬಂಧಕರಿಗೂ, ಆರ್ಥಿಕ ಸಹಾಯ ಒದಗಿಸುವ ಬ್ಯಾಂಕಿಗೂ ಕಳುಹಿಸಿಕೊಡತಕ್ಕದ್ದು. ದೃಢೀಕೃತ ಪ್ರತಿಯನ್ನು ಸಂಘದ ನೋಟೀಸ್ ಬೋರ್ಡಿನ ಮೇಲೆ ಪ್ರಕಟಿಸತಕ್ಕದ್ದು.

15) ನಡವಳಿಕೆಗಳನ್ನು ದಾಖಲಿಸಿರುವ ನಡವಳಿಕೆ ಪುಸ್ತಕವನ್ನು

(ಅ) ಸಂಘದ ನೊಂದಾಯಿತ ಕಛೇರಿಯಲ್ಲಿ ಇರಿಸತಕ್ಕದ್ದು.

(ಆ) ಸಂಘದ ಕಛೇರಿ ವೇಳೆಯಲ್ಲಿ ಸದಸ್ಯರ ಪರಿವೀಕ್ಷಣೆಗೆ ಲಭ್ಯವಿರತಕ್ಕದ್ದು. ಅದರ ನಕಲು ಕೇಳಿ ಅರ್ಜಿ ಸಲ್ಲಿಸಿದಾಗ ಅದರ ನಕಲನ್ನು ಅವರಿಗೆ ಒದಗಿಸತಕ್ಕದ್ದು.

16) ಸಾಮಾನ್ಯವಾಗಿ ಕಾರ್ಯಸೂಚಿಯಲ್ಲಿನ ವಿಷಯ ಹೊರತುಪಡಿಸಿ ಅನ್ಯ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ತೆಗದುಕೊಳ್ಳಲಾಗದು. ಆದರೆ ತುರ್ತು ವಿಷಯಗಳಿದ್ದು ಎಲ್ಲ ನಿರ್ದೇಶಕರಿಗೆ ಅದಕ್ಕೆಟಿಪ್ಪಣಿ ಒದಗಿಸಿದ್ದಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯವಾಗಿ ತೆಗೆದುಕೊಂಡು ಮತ್ತು ಚರ್ಚೆ ನಂತರ ನಿರ್ಧಾರ ತೆಗೆದುಕೊಳ್ಳಬಹುದು.

ಆದರೆ ಕೆಲವು ವಿಷಯಗಳನ್ನು ಹೆಚ್ಚುವರಿ ವಿಷಯವಾಗಿ ತೆಗೆದುಕೊಳ್ಳುವಂತಿಲ್ಲ

1. ನಿರ್ದೇಶಕರ ಚುನಾವಣೆ.
2. ಪದಾಧಿಕಾರಿಗಳ ಚುನಾವಣೆ.
3. ಸಹಮತದ ಮೇಲೆ ನಿರ್ದೇಶಕರ ನೇಮಕಾತಿ.
4. ಖಾಲಿಯಾದ ನಿರ್ದೇಶಕ ಸ್ಥಾನವನ್ನು ಸಹಮತದಿಂದ ಭರ್ತಿ ಮಾಡುವುದು.
5. ನೌಕರರ ವಿರುದ್ಧ ಶಿಸ್ತುಕ್ರಮ.
6. ಆರ್ಥಿಕ ಪರಿಣಾಮ ಬೀರುವ ಯಾವುದೇ ವಿಷಯ.

17) ಆಡಳಿತ ಮಂಡಳಿಯು ಕಾಯ್ದೆ, ಕಾನೂನು (ನಿಯಮ) ಮತ್ತುಉಪನಿಯಮಕ್ಕೆ ವ್ಯತಿರಿಕ್ತಅಥವ ಸಂಘದ ಹಿತಾಸಕ್ತಿಗೆಧಕ್ಕೆ ಬರುವಂತಹ ಯಾವುದೇ ತೀರ್ಮಾನ ತೆಗೆದುಕೊಳ್ಳುವಂತಿಲ್ಲ ಈ ಸಂದರ್ಭದಲ್ಲಿ ಎಲ್ಲ ನಿರ್ದೇಶಕರು ಜಂಟಿ ಜವಾಬ್ದಾರರಾಗಿರುತ್ತಾರೆ.

18) ಪ್ರತಿ ಸಭೆಯ ನಡವಳಿಕೆಗಳಿಗೆ ಮುಖ್ಯಕಾರ್ಯನಿರ್ವಾಹಕರು ಮತ್ತು ಸಭಾಧ್ಯಕ್ಷರು ಸಹಿ ಮಾಡತಕ್ಕದ್ದು ಮತ್ತು ನಡವಳಿಕೆಗಳನ್ನು ಏಳುದಿನಗಳ ಒಳಗಾಗಿ ಎಲ್ಲ ನಿರ್ದೇಶಕರಿಗೂ ಕಳುಹಿಸಿಕೊಡುವುದು.

19) ಯಾವುದೇ ತೀರ್ಮಾನಗಳನ್ನು ದಾಖಲಿಸುವಲ್ಲಿ ಸಭೆಯಲ್ಲಿನ ನಿರ್ಧಾರದಂತೆ ಆಗಿಲ್ಲವೆಂದು ಕಂಡು ಬಂದರೆ ಅಥವ ಸಭೆಯಲ್ಲಿ ಚರ್ಚೆಗೆ ಬಂದಿಲ್ಲ ಎಂದು ಕಂಡುಬಂದಲ್ಲಿ ನಡವಳಿಕೆ ತಲುಪಿದ ಮೂರು ದಿನಗಳ ಒಳಗೆ ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದು. ಒಂದು ಸಮಯ ಬಹುಮತದಲ್ಲಿ ಆಡಳಿತ ಮಂಡಳಿ ಸದಸ್ಯರು ಭಿನ್ನಅಭಿಪ್ರಾಯ ವ್ಯಕ್ತ ಪಡಿಸಿದಲ್ಲಿ ಮುಖ್ಯಕಾರ್ಯನಿರ್ವಾಹಕರು ಆ ತೀರ್ಮಾನವನ್ನು ಅನುಷ್ಠಾನಗೊಳಿಸುವಂತಿಲ್ಲ ಮತ್ತು ವಿಷಯವನ್ನು ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸುವುದು.

20) ಆಡಳಿತ ಮಂಡಳಿ ಸಭೆಗೆ ಅಧ್ಯಕ್ಷರು, ಉಪಾಧ್ಯಕ್ಷರು ಗೈರು ಹಾಜರಾದ ಸಂದರ್ಭದಲ್ಲಿ ತಮ್ಮೊಳಗೆ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಂಡು ಸಭೆ ನಡೆಸಬಹುದು.

21) ಒಂದು ಸಹಕಾರ ಸಂಘವನ್ನು ಮತ್ತೊಂದು ಸಹಕಾರ ಸಂಘದಲ್ಲಿನ ಸಾಮಾನ್ಯ ಸಭೆ ಅಥವ ಆಡಳಿತ ಮಂಡಳಿ ಸಭೆಯಲ್ಲಿ ಪ್ರತಿನಿಧಿಸುವಲ್ಲಿ ಆ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಅಥವ ನಿರ್ದೇಶಕರು ಮಾತ್ರ ಆಡಳಿತ ಮಂಡಳಿಯಿಂದ ಅಧಿಕೃತ ಅನುಮತಿಯೊಂದಿಗೆ ಆ ಸಭೆಯಲ್ಲಿ ಭಾಗವಹಿಸಬಹುದು. ಆಡಳಿತ ಮಂಡಳಿ ಇಲ್ಲದ ಸಂದರ್ಭದಲ್ಲಿ ಆಡಳಿತಾಧಿಕಾರಿ, ವಿಶೇಷಾಧಿಕಾರಿ ಪ್ರತಿನಿಧಿಸಬಹುದು.

ಈ ನಿಯಮಗಳ ಪಾಲನೆಯನ್ನು ಮುಖ್ಯಕಾರ್ಯನಿರ್ವಾಹಕರು, ಪದಾಧಿಕಾರಿಗಳು ನಿರ್ದೇಶಕರು ಮಾಡಿದಲ್ಲಿ ಗೊಂದಲಗಳಿರುವುದಿಲ್ಲ. ಘರ್ಷಣೆಗೆ ಯಾವುದೂ ಅವಕಾಶವಿರುವುದಿಲ್ಲ. ಸುಗಮ ತೀರ್ಮಾನ ಮತ್ತು ಸಂಘದ ಅಭಿವೃದ್ಧಿ ಮತ್ತು ಸದಸ್ಯರ ಹಿತಾಸಕ್ತಿ ಸಾಧ್ಯವಾಗುತ್ತದೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳವಳಿಯ ಉಗಮ

**ಲೇಖನ : ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು**

**ಸಹಕಾರ :** ಸಹಕಾರ ಅಂದರೆ ಜೊತೆಗೂಡಿ ಕೆಲಸ ಮಾಡುವುದು, ಕೂಡಿ ಬಾಳುವುದು. ಇದು ಮಾನವ ಸಮಾಜ ಆರಂಭವಾದ ಕಾಲದಿಂದಲೂ ಅದರ ಅವಿಭಾಜ್ಯ ಅಂಗವಾಗಿರುತ್ತದೆ. ಹಿಂದಿನ ಕಾಲದಲ್ಲಿ ಸಹಕಾರವು ಹೆಚ್ಚಾಗಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ್ದಾಗಿತ್ತು. ಇಂತಹ ಸಹಕಾರದ ಚಟುವಟಿಕೆಗಳಲ್ಲಿ ವೈಯಕ್ತಿಕ ಲಾಭ ಗಳಿಕೆಯಾಗಲಿ ಅಥವಾ ಆರ್ಥಿಕ ಸವಲತ್ತುಗಳನ್ನು ಪಡೆದುಕೊಳ್ಳುವಂತ ವ್ಯವಹಾರ ವಹಿವಾಟುಗಳಾಗಲಿ ಇರುತ್ತಿರಲಿಲ್ಲ. ಬದಲಿಗೆ ಸಹಕಾರವು ಪರಸ್ಪರ ಒಳಿತಿಗಾಗಿ ಜೊತೆಗೂಡಿ ಭಾಗವಹಿಸುವ ಕಾರ್ಯವಿಧಾನವಾಗಿತ್ತು. ಮಾನವ ಸಮಾಜದ ಅವಿಭಾಜ್ಯ ಅಂಗವಾದ 'ಸಹಕಾರ' ವಿಧಾನವನ್ನು ಆರ್ಥಿಕ ಕ್ಷೇತ್ರಕ್ಕೆ (Economic Sector) ಆರ್ಥಿಕ ಚಟುವಟಿಕೆಗಳಿಗೆ (Economic activities) ಅಳವಡಿಕೆ ಮಾಡಿರುವ ಮೂಲವನ್ನು ಕೈಗಾರಿಕಾ ಕ್ರಾಂತಿಯು ಆರಂಭವಾದ ನಂತರ ಗುರ್ತಿಸಬಹುದು.

**ಇಂಗ್ಲೆಂಡ್‌ನಲ್ಲಿ ಸಹಕಾರ ಚಳುವಳಿಯ ಆರಂಭ :** ಜಗತ್ತಿನಲ್ಲಿ ಪ್ರಪ್ರಥಮವಾಗಿ ಇಂಗ್ಲೆಂಡ್‌ನಲ್ಲಿ 18ನೇ ಶತಮಾನದ ಕೊನೆಯ ಅರ್ಧದಲ್ಲಿ ಕೈಗಾರಿಕಾ ಕ್ರಾಂತಿಯು (Industrial Revolution) ಆರಂಭವಾಗಿರುತ್ತದೆ. (ಕೈಗಾರಿಕಾ ಕ್ರಾಂತಿಯು 1750ರಲ್ಲಿ; 18ನೇ ಶತಮಾನದ ಮಧ್ಯಭಾಗದಲ್ಲಿ; 1740–1760ರ ಅವಧಿಯಲ್ಲಿ ಆರಂಭವಾಗಿರುತ್ತದೆಂದು ಸಹ ಭಿನ್ನವಾಗಿ ದಾಖಲಿಸಿರುವುದುಂಟು). ಇದು ಕ್ರಮೇಣವಾಗಿ ಬೇರೆ ದೇಶಗಳಿಗೂ ವ್ಯಾಪಿಸಿತು. ಕೈಗಾರಿಕಾ ಕ್ರಾಂತಿಯಿಂದಾಗಿ ಇಂಗ್ಲೆಂಡ್‌ನಲ್ಲಿ ಅನೇಕ ಬದಲಾವಣೆಗಳು ಉಂಟಾದವು. ಉತ್ಪಾದನೆಯಲ್ಲಿ ಕೈಗೆಲಸ ಕಡಿಮೆ ಆಗಿ ಬಂಡವಾಳ ಆಧಾರಿತ ಯಂತ್ರಗಳ ಬಳಕೆ ಹೆಚ್ಚಾಗಲಾರಂಭಿಸಿತು. ವೈಜ್ಞಾನಿಕ ಸಂಶೋಧನೆಗಳು ನಡೆದು ಹೊಸ ಹೊಸ ಕಾರ್ಖಾನೆಗಳು ಆರಂಭವಾದವು. ಇದರ ಪರಿಣಾಮವಾಗಿ ಸಮಾಜವು ಬಂಡವಾಳ ಶಾಹಿಗಳು (Capitalists) ಅಂದರೆ ಶ್ರೀಮಂತರು ಹಾಗೂ ನಿರ್ಗತಿಕರು ಎಂಬ ಎರಡು ವರ್ಗಗಳಾಗಿ ವಿಭಜನೆ ಗೊಂಡಿತು. ಕಾರ್ಖಾನೆಗಳ ಮಾಲೀಕರು ಹಾಗೂ ವ್ಯಾಪಾರಸ್ಥರು ಕಾರ್ಮಿಕರನ್ನು ಮತ್ತು ಬಡವರನ್ನು ಶೋಷಣೆ ಮಾಡಲಾರಂಭಿಸಿದರು. ಕಾರ್ಖಾನೆಗಳ ಮಾಲೀಕರು ಕಡಿಮೆ ವೇತನ ನೀಡಿ ಹೆಚ್ಚು ಅವಧಿಗೆ ದುಡಿಸಿಕೊಂಡು ವಸತಿ, ವೈದ್ಯಕೀಯ, ಶಿಕ್ಷಣ ಇತ್ಯಾದಿ ಯಾವುದೇ ಸವಲತ್ತುಗಳನ್ನು ನೀಡದೆ ಲಾಭಗಳಿಕೆಯನ್ನು ಗುರಿಯಾಗಿಸಿಕೊಂಡಿದ್ದರು.

ವ್ಯಾಪಾರಸ್ತರು ಗುಣಮಟ್ಟವಿಲ್ಲದ ದಿನಬಳಕೆ ವಸ್ತುಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡಿ ಶೋಷಣೆ ಮಾಡುತ್ತಿದ್ದರು. ಇದರಿಂದಾಗಿ ಕಾರ್ಮಿಕರು ಮತ್ತು ಬಡವರ ಜೀವನ ನರಕವಾಗಿ ಮಾರ್ಪಟ್ಟಿತು. ಯಾವುದೇ ನಿಯಂತ್ರಣವಿಲ್ಲದ ಇಂತಹ ಸ್ವತಂತ್ರ ಆರ್ಥಿಕ ನೀತಿಗೆ (Laisseze Faire –ಲೆಸ್ಸಾ ಫೇರ್) ಅಂದಿನ ರಾಜಕೀಯ ವ್ಯವಸ್ಥೆ ಕೂಡ ಪರವಾಗಿತ್ತು. ಇದರಿಂದಾಗಿ ಶೋಷಣೆಯು ಕ್ರಮೇಣವಾಗಿ ಮಿತಿಮೀರ ತೊಡಗಿತು. ನೊಂದ ಕಾರ್ಮಿಕರು ಸಹನೆ ಕಳೆದುಕೊಂಡು ಮಾಲಿಕರ ವಿರುದ್ಧ ಸಿಡಿದೆದ್ದರು. ಜನರು ಸಹ ಸರ್ಕಾರದ ತಟಸ್ಥ ಧೋರಣೆಯನ್ನು ವಿರೋಧಿಸಲಾರಂಭಿಸಿದರು. ಕೈಗಾರಿಕಾ ಕ್ರಾಂತಿಯಿಂದಾಗಿ ಉಂಟಾದ ಕೆಟ್ಟ ಪರಿಣಾಮಗಳು ನೊಂದ ಜನರಲ್ಲಿ ವಿಚಾರವಂತಿಕೆಯನ್ನು ಹುಟ್ಟು ಹಾಕಿದವು. ಅದೇ ವೇಳೆಗೆ, ಹದಗೆಟ್ಟ ಪರಿಸ್ಥಿತಿ ಮತ್ತು ನಿರ್ಗತಿಕರ ಶೋಚನೀಯ ಸ್ಥಿತಿಯನ್ನು ಕಂಡಂತಹ ಆರ್ಥಿಕ, ಸಾಮಾಜಿಕ ಚಿಂತಕರು ಶೋಷಣೆಗೆ ಒಳಗಾದ ಜನರ ಸ್ಥಿತಿಗತಿಗಳ ಸುಧಾರಣೆಗಾಗಿ ಹಾಗೂ ಮಾಲೀಕರು ಮತ್ತು ಕಾರ್ಮಿಕರ ನಡುವಿನ ಸಂಬಂಧದ ಸುಧಾರಣೆಗಾಗಿ ಪ್ರಯತ್ನಗಳನ್ನು ಮಾಡಲಾರಂಭಿಸಿದರು. ಇವರುಗಳ ಪೈಕಿ ರಾಬರ್ಟ್ ಓವೆನ್ ಪ್ರಮುಖವಾಗಿರುತ್ತಾರೆ. ಇವರು ಕಾರ್ಮಿಕರು ಮತ್ತು ಬಡವರ ಆರ್ಥಿಕ–ಸಾಮಾಜಿಕ ಸುಧಾರಣೆಗಾಗಿ ಅನೇಕ ಪ್ರಯತ್ನಗಳನ್ನು ಮಾಡಿದರು. ಅದರಲ್ಲಿ ಸಹಕಾರ ವಿಚಾರಧಾರೆಯ ಭೋದನೆ ಮತ್ತು 'ಸಹಕಾರ' ಆಧಾರಿತ ಪ್ರಯೋಗಗಳು ಬಹಳ ಮಹತ್ವದಿಂದ ಕೂಡಿರುತ್ತವೆ.



**ರಾಬರ್ಟ್ ಓವೆನ್ (Robert Owen) (1771–1858)**

ರಾಬರ್ಟ್ ಓವೆನ್ ಇಂಗ್ಲೆಂಡ್‌ನ ನ್ಯೂಟನ್ (Newton) ಎಂಬ ಸ್ಥಳದಲ್ಲಿ 1771ರಲ್ಲಿ ಜನಿಸಿದರು. ಇವರು ಆರಂಭದಲ್ಲಿ ಒಬ್ಬ ಕಾರ್ಮಿಕನಾಗಿ ಕೆಲಸ ಮಾಡಿ ಒಳ್ಳೆಯ ಅನುಭವ ಗಳಿಸಿದರು. ಇವರು ನ್ಯೂಲಾರ್ಕ್ ಮಿಲ್ಸ್ ಗ್ಲಾಸ್‌ಗೋವ್‌ದ ಮಾಲೀಕನಾಗಿದ್ದ ಒಬ್ಬಳೇ ಮಗಳನ್ನು ಮದುವೆಯಾದರು ಹಾಗೂ ತನ್ನ ಮಾವನ ಮರಣದ ನಂತರ ಓವೆನ್‌ರೆ ಕಾರ್ಖಾನೆಯ ಮಾಲೀಕರಾದರು. ಓವೆನ್‌ರು ಉತ್ತಮ ಸಾಮಾಜಿಕ ಪರಿಸರ ಮತ್ತು ಸನ್ನಡತೆಗೆ (Human Charcter) ಹೆಚ್ಚಿನ ಮಹತ್ವವನ್ನು ನೀಡಿದರು. ಓವೆನ್ನರ ವಿಚಾರಧಾರೆಯು ಅವರದ್ದೆ ಆದ ತತ್ವಜ್ಞಾನವನ್ನು ಆಧರಿಸಿದ್ದು, ಅದನ್ನು "ಸನ್ನಿವೇಶನಗಳ ಸಿದ್ಧಾಂತ" (Doctorine of Circumstances) ಎಂದು ಕರೆಯಲಾಗುತ್ತದೆ. ಮನುಷ್ಯ ಹುಟ್ಟುತ್ತಾ ಒಳ್ಳೆಯವನ್ನಾಗಲಿ ಅಥವಾ ಕೆಟ್ಟವನ್ನಾಗಲಿ ಆಗಿರುವುದಿಲ್ಲ. ಆದರೆ ಸಂದರ್ಭಗಳು ಪರಿಣಾಮ ಬೀರಿ ಮನುಷ್ಯವನ್ನು ಕೆಟ್ಟವನು ಅಥವಾ ಒಳ್ಳೆಯವನನ್ನಾಗಿ ಮಾಡುತ್ತವೆ, ಅಂದರೆ, ಒಬ್ಬ

**ಸಹಕಾರ ಗ್ರಾಮಗಳು ವಿಫಲವಾದ ಮೇಲೆ ಓವೆನರ್ ದುಡಿಮೆಯ ವಿನಿಮಯ (The Labour Exchange) ಯೋಜನೆಯನ್ನು ಕೈಗೆತ್ತಿಕೊಂಡರು ಹಾಗೂ 1832ರಲ್ಲಿ "ನ್ಯಾಷನಲ್ ಇಕ್ವಿಟೆಬಲ್ ಲೇಬರ್ ಎಕ್ಸ್‌ಚೇಂಜ್" ಅನ್ನು ಸ್ಥಾಪಿಸಿದರು. ಉತ್ಪಾದಕರು ತಾವು ಉತ್ಪಾದಿಸಿದ ಪದಾರ್ಥಗಳನ್ನು ಈ ಸಂಸ್ಥೆಯಲ್ಲಿ ಇಟ್ಟು ಲೇಬರ್ ನೋಟ್ಸ್‌ನ್ನು ಪಡೆಯಬಹುದಿತ್ತು. ಪದಾರ್ಥಗಳ ಬೆಲೆಯನ್ನು ಹಣಕ್ಕೆ ಬದಲಾಗಿ ಅವುಗಳನ್ನು ಉತ್ಪಾದಿಸಲು ತೆಗೆದುಕೊಂಡ ಸಮಯದ ಗಂಟೆಗಳ ಸಂಖ್ಯೆಯನ್ನೇ ಬೆಲೆಯಾಗಿ ನಮೂದಿಸಲಾಗುತಿತ್ತು. ಉತ್ಪಾದಕರು ಇಂಥ ಲೇಬರ್ ನೋಟ್ಸ್‌ಗಳನ್ನು ಉಪಯೋಗಿಸಿ ಪದಾರ್ಥಗಳ ವಿನಿಮಯ ಮಾಡಿಕೊಳ್ಳಬಹುದಿತ್ತು ಹಾಗೂ ಕೆಲಸಗಾರರು ತಾವು ಮಾಡಿದ ಕೆಲಸಕ್ಕೆ ಪಡೆಯುತ್ತಿದ್ದ ಲೇಬರ್ ನೋಟ್ಸ್‌ನ್ನು ಹಾಜರುಪಡಿಸಿ ಅದಕ್ಕೆ ಸಮನಾದ ಪದಾರ್ಥಗಳನ್ನು ಪಡೆದುಕೊಳ್ಳಬಹುದಿತ್ತು. ಈ ಪ್ರಯೋಗವು ಸಹ ವಿಫಲಗೊಂಡಿತು. ಇದಕ್ಕೆ ಮುಖ್ಯ ಕಾರಣ ಕಡಿಮೆ ಗುಣಮಟ್ಟದ ಪದಾರ್ಥಗಳ ದಾಸ್ತಾನು ಉಳಿದುಕೊಂಡಿದ್ದು, ಎಲ್ಲಾ ಬಗೆಯ ಪದಾರ್ಥಗಳು ದೊರೆಯದಿದ್ದಿದ್ದು, ಕಡಿಮೆ ವಹಿವಾಟು ಹಾಗೂ ಅಪ್ರಮಾಣಿಕತೆ ಇತ್ಯಾದಿ.**

ಮನುಷ್ಯನ ಮಾನಸಿಕ ಮತ್ತು ನೈತಿಕ ಅಭಿವೃದ್ಧಿಯಲ್ಲಿ ಸಾಮಾಜಿಕ ಪರಿಸರ ಪ್ರಭಾವ ಉಳ್ಳದ್ದಾಗಿರುತ್ತದೆ. ಹಿಂಸೆ, ದ್ವೇಷ ರಹಿತ ಸಮಾಜ ನಿರ್ಮಾಣಕ್ಕಾಗಿ ಪರಿಸರ ಬದಲಾವಣೆ ಆಗಬೇಕೆಂದು ಪ್ರತಿಪಾದಿಸಿದರು. ಇವರು ಬಂಡವಾಳಶಾಹಿ ಪದ್ಧತಿ ಮತ್ತು ಸ್ಪರ್ಧೆಯು ಸ್ವಾರ್ಥ, ಶೋಷಣೆ, ನಿರುದ್ಯೋಗ ಇತ್ಯಾದಿ ಸಾಮಾಜಿಕ ಅನಿಷ್ಟಗಳಿಗೆ ಕಾರಣವಾಗಿ ಮನುಷ್ಯನ ಸುಖಃಶಾಂತಿಗೆ ಅಡಚಣೆಯಾಗುತ್ತದೆಂದು ಹೇಳಿದರು. ಬಡವರು ಅವರೇ ಸ್ವತಃ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ, ಶ್ರೀಮಂತರು ಬಡವರ ನೆರವಿಗೆ ಮುಂದಾಗಬೇಕೆಂದು ಕರೆ ನೀಡಿದರು.

ಓವೆನ್‌ರು ತಮ್ಮ ಸ್ವಂತ ಕಾರ್ಖಾನೆಯಲ್ಲಿ ಕಾರ್ಮಿಕರ ಒಳಿತಿಗಾಗಿ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡರು, ಕೆಲಸದ ಅವಧಿಯನ್ನು ಕಡಿಮೆ ಮಾಡಿದರು, ವೇತನ ಹೆಚ್ಚಿಸಿದರು, ವಸತಿ ಮತ್ತು ವೈದ್ಯಕೀಯ ಸವಲತ್ತುಗಳನ್ನು ಒದಗಿಸಿದರು, ಬಾಲಕಾರ್ಮಿಕ ಪದ್ದತಿಯನ್ನು ರದ್ದುಗೊಳಿಸಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಕಟ್ಟಿಸಿದರು. ಹೀಗೆ ಬಡತನ, ಹಸಿವು, ಕಾರ್ಮಿಕರ ಸಂಕಷ್ಟಗಳಿಗೆ ಮರುಕ ಪಟ್ಟು ಹೊಸ ನೈತಿಕ ಜಗತ್ತಿನ (New Moral World) ಹೊಸ ಆದರ್ಶ ಸಾಮಾಜಿಕ ವ್ಯವಸ್ಥೆಯ ನಿರ್ಮಾಣಕ್ಕಾಗಿ (Ideal System of Society) ಭೋಧಿಸಿದರು.



ರಾಬರ್ಟ್ ಓವೆನ್‌ರು ತಮ್ಮ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಕೈಗೊಂಡಂತ ಸುಧಾರಣಾ ಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಬೇರೆ ಕಾರ್ಖಾನೆಗಳ ಮಾಲೀಕರುಗಳಿಗೆ ಮನವಿ ಮಾಡಿದರು. ಆದರೆ ಅದಕ್ಕೆ ಸ್ಪಂದನ ದೊರೆಯಲಿಲ್ಲ, ನಂತರ ಶಾಸನ ರೂಪದಲ್ಲಿ ಕಾನೂನನ್ನು ಜಾರಿಗೆ ತರಬೇಕೆಂದು ಶಾಸನ ಸಭೆಯ ಸದಸ್ಯರಿಗೆ ಮನವಿ ಮಾಡಿದರು. ಆದರಿಂದಲೂ ಸಹ ಪ್ರಯೋಜನವಾಗಲಿಲ್ಲ, ನಂತರ ಕಾರ್ಮಿಕರೆ ಅಂದರೆ, ಕೆಲಸಗಾರರೇ ಮಾಲೀಕರನ್ನು ಅವಲಂಭಿಸದೆ ಹಾಗೂ ಹೊರಗಿನ ನೆರವು ಇಲ್ಲದೆ ಸ್ವ ಇಚ್ಛೆಯಿಂದ ಪರಸ್ಪರ ಸಹಾಯ (Mutual Help) ತತ್ವದ ಆಧಾರಿತವಾಗಿ ಸ್ವ ಬೆಂಬಲಿತ ಸಹಕಾರ ಗ್ರಾಮಗಳನ್ನು (Villages of Cooperatives or CooperativeColones) ಸ್ಥಾಪಿಸಿ ಅವುಗಳ ಮೂಲಕ ಸವಲತ್ತುಗಳನ್ನು ಪಡೆದುಕೊಳ್ಳಬೇಕೆಂದು ಕರೆ ನೀಡಿದರು. ಈ ಸಹಕಾರ ಗ್ರಾಮಗಳಲ್ಲಿ ಕೆಲಸಗಾರರು ಸ್ವ ಇಚ್ಛೆ ಮತ್ತು ಸಮಾನತೆ ಆದಾರದ ಮೇಲೆ ಉತ್ಪಾದಕರು ಹಾಗೂ ಗ್ರಾಹಕರಾಗಿ ಸೇರುವುದರ ಜೊತೆಗೆ ಅವರೇ ಮಾಲೀಕರಾಗಿ, ಸ್ವಯಂ ಉದ್ಯೋಗಿಗಳಾಗಿ ಹಾಗೂ ಸ್ವಯಂ ಆಡಳಿತವನ್ನು ನಿರ್ವಹಿಸಿ ಅಗತ್ಯವಾದ ಸವಲತ್ತುಗಳನ್ನು ಪಡೆದುಕೊಳ್ಳುವ ವಿಧಾನವಾಗಿರುತ್ತದೆ. ಇಂತಹ ಸಹಕಾರ ಗ್ರಾಮಗಳಲ್ಲಿ ಸದಸ್ಯರು ಆಸ್ತಿಗಳನ್ನು ಒಟ್ಟುಗೂಡಿಸಿ, ಸಾಮೂದಾಯಿಕ ಮಾಲೀಕತ್ವವನ್ನು ಹೊಂದಿ ಮತ್ತು ಸಾಮುದಾಯಕ ದುಡಿಮೆ ಮಾಡಿ ಅದರಿಂದ ಗಳಿಸಿದ ಫಲವನ್ನು ಹಂಚಿಕೊಂಡು ಜೀವನ ನಡೆಸುವ ವ್ಯವಸ್ಥೆಯಿರುತ್ತದೆ. ಓವೆನ್‌ರು ಪ್ರತಿಪಾದಿಸಿದ ಈ ಪದ್ದತಿಯಲ್ಲಿ ಲಾಭ, ಸ್ಪರ್ಧೆ, ಹಣದ ಚಲಾವಣೆ, ಆಸ್ತಿ ಮಾಲೀಕತ್ವ, ಮಧ್ಯವರ್ತಿಗಳು, ಶೋಷಣೆ, ಕಾರ್ಮಿಕ ಮಾಲೀಕ ಮತ್ತು ಬಡವ ಶ್ರೀಮಂತ ಎಂಬ ಬೇಧಗಳಿರುವುದಿಲ್ಲ, ಶೋಷಣೆ, ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಗಾಗಿ ಸಹಕಾರ ಗ್ರಾಮಗಳನ್ನು ಸ್ಥಾಪಿಸಬೇಕೆಂಬ ಪ್ರಸ್ತಾವನೆಯನ್ನು ಸರ್ಕಾರಕ್ಕೆ ನೀಡಿದರು. ಇದಕ್ಕೆ ಬ್ರಿಟಿಷ್ ಸರ್ಕಾರದಿಂದ ಬೆಂಬಲ ದೊರೆಯಲಿಲ್ಲ. ಸ್ವದೇಶದಲ್ಲಿ ಬೆಂಬಲ

ದೊರೆಯದಿದ್ದಾಗ ಅಮೇರಿಕಕ್ಕೆ ತೆರಳಿ ಅಲ್ಲಿಯ ಅಧ್ಯಕ್ಷರ ನೆರವಿನಿಂದ ಇಂಡಿಯಾನದಲ್ಲಿ "ನ್ಯೂಹಾರ್ಮೋನಿ" (New Harmony) ಸಹಕಾರ ಗ್ರಾಮವನ್ನು ಪ್ರಥಮ ಪ್ರಯೋಗವಾಗಿ 1825ರಲ್ಲಿ ಸ್ಥಾಪಿಸಿದರು. ಇದರಲ್ಲಿ 900 ಸದಸ್ಯರು. 30,000 ಎಕರೆ ಜಮೀನು ಒಳಗೊಂಡಿತ್ತು. ಅಲ್ಲದೆ ಅಗತ್ಯ ಕಟ್ಟಡ, ಅಡಿಗೆ ಮತ್ತು ಊಟದ ಮನೆ, ಕಾರ್ಖಾನೆಗಳು, ಉಗ್ರಾಣ, ಚರ್ಚ್ ಇತ್ಯಾದಿ ಎಲ್ಲಾ ಸೌಕರ್ಯ ಮತ್ತು ಮೂಲಭೂತ ವ್ಯವಸ್ಥೆಗಳಿದ್ದವು. ಆದರೆ, ಇದು ಅಶಿಸ್ತು, ಸ್ವಾರ್ಥ, ಅವಿದ್ಯೆ ಹಾಗೂ ವ್ಯವಸ್ಥಾಪನಾ ಸಾಮರ್ಥ್ಯದ ಕೊರತೆಯಿಂದಾಗಿ ಎರಡೇ ವರ್ಷದಲ್ಲಿ ವಿಫಲಗೊಂಡಿತು. ಸದಸ್ಯರು ಕಾಲೋನಿಯನ್ನು ಬಿಟ್ಟು ಭೂಮಿಯನ್ನು ವೈಯಕ್ತಿಕವಾಗಿ ಸಾಗುವಳಿ ಮಾಡಲಾರಂಭಿಸಿದರು. ಇದಾದ ನಂತರ ಓವೆನ್‌ರು ಇಂಗ್ಲೆಂಡ್‌ಗೆ ವಾಪಾಸ್ಸಾದರು. ಇದೇ ಅವಧಿಯಲ್ಲಿ ಅವರ ಅನುಯಾಯಿಗಳು ಇಂಗ್ಲೆಂಡ್‌ನಲ್ಲಿ "ಆರ್ಬಿಸ್ಟ್‌ನ್ ಕಾಲೋನಿಯನ್ನು (Orbiston Colony), ಹ್ಯಾಂಪ್ ಶೈರ್‌ನಲ್ಲಿ "ಕ್ಲೀನ್ಸ್‌ವುಡ್ ಅಥವಾ ಹಾರ್ಮೋನಿಹಾಲ್ (Qunees Wood or Harmony Hall) ಕಾಲೋನಿಗಳನ್ನು ಸ್ಥಾಪಿಸಿದರು. ಈ ಕಾಲೋನಿಗಳು ವಿಫಲಗೊಂಡವು. ಸಹಕಾರ ಗ್ರಾಮಗಳನ್ನು ಸ್ಥಾಪಿಸುವುದುರ ಮೂಲಕ ಹೊಸ ಸಾಮಾಜಿಕ ವಿಧಾನವನ್ನು (New Social Order) ಜಗತ್ತಿನಲ್ಲಿ ಸ್ಥಾಪಿಸಬೇಕೆಂಬ ಓವೆನರ್ ಉದ್ದೇಶ ಯಶಸ್ವಿಯಾಗಲಿಲ್ಲ.

ಸಹಕಾರ ಗ್ರಾಮಗಳು ವಿಫಲವಾದ ಮೇಲೆ ಓವೆನರ್ ದುಡಿಮೆಯ ವಿನಿಮಯ (The Labour Exchange) ಯೋಜನೆಯನ್ನು ಕೈಗೆತ್ತಿಕೊಂಡರು ಹಾಗೂ 1832ರಲ್ಲಿ "ನ್ಯಾಷನಲ್ ಇಕ್ವಿಟೆಬಲ್ ಲೇಬರ್ ಎಕ್ಸ್‌ಚೇಂಜ್" ಅನ್ನು ಸ್ಥಾಪಿಸದರು. ಉತ್ಪಾದಕರು ತಾವು ಉತ್ಪಾದಿಸಿದ ಪದಾರ್ಥಗಳನ್ನು ಈ ಸಂಸ್ಥೆಯಲ್ಲಿ ಇಟ್ಟು ಲೇಬರ್ ನೋಟ್ಸ್‌ನ್ನು ಪಡೆಯಬಹುದಿತ್ತು. ಪದಾರ್ಥಗಳ ಬೆಲೆಯನ್ನು ಹಣಕ್ಕೆ ಬದಲಾಗಿ ಅವುಗಳನ್ನು ಉತ್ಪಾದಿಸಲು ತೆಗೆದುಕೊಂಡ ಸಮಯದ ಗಂಟೆಗಳ ಸಂಖ್ಯೆಯನ್ನೇ ಬೆಲೆಯಾಗಿ ನಮೂದಿಸಲಾಗುತಿತ್ತು. ಉತ್ಪಾದಕರು ಇಂಥ ಲೇಬರ್ ನೋಟ್ಸ್‌ಗಳನ್ನು ಉಪಯೋಗಿಸಿ ಪದಾರ್ಥಗಳ ವಿನಿಮಯ ಮಾಡಿಕೊಳ್ಳಬಹುದಿತ್ತು ಹಾಗೂ ಕೆಲಸಗಾರರು ತಾವು ಮಾಡಿದ ಕೆಲಸಕ್ಕೆ ಪಡೆಯುತ್ತಿದ್ದ ಲೇಬರ್ ನೋಟ್ಸ್‌ನ್ನು ಹಾಜರುಪಡಿಸಿ ಅದಕ್ಕೆ ಸಮನಾದ ಪದಾರ್ಥಗಳನ್ನು ಪಡೆದುಕೊಳ್ಳಬಹುದಿತ್ತು. ಈ ಪ್ರಯೋಗವು ಸಹ ವಿಫಲಗೊಂಡಿತು. ಇದಕ್ಕೆ ಮುಖ್ಯ ಕಾರಣ ಕಡಿಮೆ ಗುಣಮಟ್ಟದ ಪದಾರ್ಥಗಳ ದಾಸ್ತಾನು ಉಳಿದುಕೊಂಡಿದ್ದು, ಎಲ್ಲಾ ಬಗೆಯ ಪದಾರ್ಥಗಳು ದೊರೆಯದಿದ್ದಿದ್ದು, ಕಡಿಮೆ ವಹಿವಾಟು ಹಾಗೂ ಅಪ್ರಮಾಣಿಕತೆ ಇತ್ಯಾದಿ.

ರಾಬರ್ಟ್ ಓವೆನ್‌ರು ಉತ್ತಮ ಸಾಮಾಜಿಕ ವ್ಯವಸ್ಥೆಯ ನಿರ್ಮಾಣಕ್ಕಾಗಿ ಹಾಗೂ ನಿರ್ಗತಿಕರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಸುಧಾರಣೆಗಾಗಿ ಮಾಡಿದ ಪ್ರಯತ್ನ ಪ್ರಯೋಗಗಳು ವಿಫಲವಾದವು. ಆದರೆ, ಅವರ ಬೊಧನೆ, ಸಹಕಾರ ವಿಚಾರಧಾರೆ ಹಾಗೂ ಸಾಮಾಜಿಕ ಕಳಕಳಿ ಜೀವಂತವಾಗಿ ಉಳಿಯಿತು ಹಾಗೂ ಜನರಲ್ಲಿ ಸಹಕಾರ ವಿಚಾರವಂತಿಕೆಯನ್ನು ಉಂಟು ಮಾಡಿತು. ಓವನರ್‌ರ ಉತ್ತಮ ಸಮಾಜ ನಿರ್ಮಾಣದ ಕನಸು ಕನಸಾಗಿಯೇ ಉಳಿಯಿತು. ಇವರನ್ನು ಕನಸುಗಾರನೆಂದು ಸಹ ಕರೆಯಲಾಗಿರುತ್ತದೆ. ಇಂದಿನ ಆಧುನಿಕ ಸಹಕಾರ ಚಳುವಳಿಯ ಓವೆನರ್ ಸಹಕಾರ ವಿಚಾರಧಾರೆ ಮತ್ತು ತತ್ವಜ್ಞಾನದಿಂದ ಪ್ರಭಾವಿತವಾಗಿದೆ. ಈ ಕಾರಣದಿಂದಲೇ ಓವೆನ್‌ರನ್ನು ಆಧುನಿಕ ಸಹಕಾರ ಚಳುವಳಿಯ ಮೂಲ ಪುರುಷ ಅಥವಾ ಪಿತಾಮಹ ಎಂದು ಕರೆಯಲಾಗುತ್ತದೆ.



ಡಾ. ವಿಲಿಯಂ ಕಿಂಗ್ (1786–1865) ಇವರು ವೃತ್ತಿಯಲ್ಲಿ ವೈದ್ಯರಾಗಿದ್ದರೂ ಸಹ ಸಾಮಾಜಿಕ ಸುದಾರಣೆ ಬಗ್ಗೆ ಕಳಕಳಿವುಳ್ಳವರಾಗಿದ್ದರು. ಇವರು ರಾಬರ್ಟ್ ಓವೆನ್‌ರ ವಿಚಾರಧಾರೆ, ಸಾಹಿತ್ಯ ಮತ್ತು ತತ್ವಜ್ಞಾನದ ಬೋಧನೆಗಳಿಂದ ಪ್ರಭಾವಿತರಾಗಿದ್ದರು. ಸಹಕಾರ ಪದ್ಧತಿಯನ್ನು ಪ್ರಚಾರ ಪಡಿಸಿದರು ಹಾಗೂ ಸಹಕಾರ ಸಂಘಗಳ ಸ್ಥಾಪನೆಗೆ ಉತ್ತೇಜಿಸಿದರು. ಇದರ ಪರಿಣಾಮವಾಗಿ ಸಹಕಾರದ ಅಂಗಡಿಗಳು ಸ್ಥಾಪನೆಯಾದವು. ಡಾ.ಕಿಂಗ್ ಪ್ರಜಾಪ್ರಭುತ್ವವಾದಿಯಾಗಿದ್ದು ಸ್ವ–ಇಚ್ಛೆಯ ಸದಸ್ಯತ್ವವನ್ನು ಪ್ರತಿಪಾದಿಸಿರುತ್ತಾರೆ. "ಸಹಕಾರವು ಸ್ವಇಚ್ಛೆಯಿಂದ ಕೂಡಿದ ಕ್ರಿಯೆ, ಪ್ರಪಂಚದ ಎಲ್ಲಾ ಶಕ್ತಿ ಸೇರಿದರು ಅದನ್ನು ಕಡ್ಡಾಯ ಮಾಡಲಾರದು; ಅದು ಯಾವುದೇ ಶಕ್ತಿಯನ್ನು ಅವಲಂಭಿಸಬೇಕೆಂಬುದು ಅಪೇಕ್ಷಿತವಾದುದ್ದಲ್ಲ, ಆದರೆ ಅದು ಸ್ವತಃ ಸಹಕಾರವೇ ಆಗಿರಬೇಕು" ಎಂದು ಘೋಷಿಸಿದರು.

ಸಹಕಾರದ ಪ್ರಚಾರಕ್ಕೆ 'ದಿ ಕೋ–ಅಪರೇಟರ್" ಎಂಬ ಮಾಸಿಕ ನಿಯತಕಾಲಿಕ ಪತ್ರಿಕೆಯ ಪ್ರಕಟಣೆ ಮಾಡಿದರು. ಇದರ ಪ್ರಥಮ ಸಂಚಿಕೆಯನ್ನು 1828ಲ್ಲಿ ಪ್ರಕಟಿಸಿ ಸುಮಾರು ಎರಡು ವರ್ಷಗಳ ಕಾಲ ಸಂಪಾದಕರಾಗಿ, ಸಹಕಾರ ಶಿಕ್ಷಣದ ಮೂಲಕ ಆರ್ಥಿಕ ಸ್ವಾವಲಂಬನೆಯ ಜಾಗೃತಿಯನ್ನು ಉಂಟು ಮಾಡಲು ಪ್ರಯತ್ನಿಸಿದರು.

ರಾಬರ್ಟ್ ಓವೆಲ್‌ರ ವಿಚಾರಧಾರೆಯಿಂದ ಪ್ರಭಾವಿತರಾದವರು, ಬೆಂಬಲಿಗರು ಇನ್ನೂ ಅನೇಕರಿರುತ್ತಾರೆ, ಕೆಲವರು ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಅವುಗಳು ಒಂದಲ್ಲಾ ಒಂದು ಕಾರಣದಿಂದ ಯಶಸ್ಸು ಕಾಣದೆ ವಿಫಲವಾದವು. (ಮುಂದುವರೆಯುವುದು...)

ಕೃಪೆ : ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1) 'ಸಾಲ' ಅಥವ 'ಪತ್ತು' ಎಂದರೆ**

a) 'ಸಾಲ' ಎಂದರೆ ದಾನ, ಹಿಂದಿರುಗಿಸಬೇಕಾಗಿಲ್ಲ

b) 'ಸಾಲ' ಎಂದರೆ ಷರತ್ತು ಬದ್ಧವಾಗಿ ಹಿಂತಿರುಗಿಸಬೇಕಾದದ್ದು

c) 'ಸಚಿಾಲ' ಎಂದರೆ ಆದಾಯದ ಮೂಲ

d) ಮೇಲಿನ ಮೂರು ಆಗಿರುವುದಿಲ್ಲ

**2) ಸಾಂಸ್ಥಿಕ ಮೂಲದ ಸಾಲಗಳು ಎಂದರೆ**

a) ಖಾಸಗಿ ಲೇವಾದೇವಿದಾರರು ನೀಡುವ ಸಾಲ

b) ಸಹಕಾರ ಸಂಘಗಳು ನೀಡುವ ಸಾಲ ಮಾತ್ರ

c) ಹಣಕಾಸು ಸಂಸ್ಥೆ, ಬ್ಯಾಂಕ್, ಸಹಕಾರ ಸಂಘ ನೀಡುವ ಸಾಲ

d) ಮೇಲಿನ ಮೂರು ಆಗಿರುವುದಿಲ್ಲ

**3) ಸಾಲ ಮರು ಪಾವತಿಯಾಗದಿದ್ದಲ್ಲಿ**

a) ಬಂಡವಾಳ ಸ್ಥಗಿತಗೊಳ್ಳುತ್ತದೆ.

b) ಬಂಡವಾಳ ಕುಂಟಿತಗೊಳ್ಳುತ್ತದೆ.

c) ಸಾಲದ ಚಕ್ರ ಮುರಿಯುತ್ತದೆ.

d) ಮೇಲಿನ ಮೂರು ಸರಿಯಾಗಿದೆ.

**4) ಸಹಕಾರ ಸಾಲ (ಪತ್ತು) ವ್ಯವಸ್ಥೆಯ ಬುನಾದಿ**

a) ಸ್ವ ಸಹಾಯ ಮತ್ತು ಪರಸ್ಪರ ಸಹಾಯ

b) ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ

c) ಮೇಲಿನ (ಎ) ಮತ್ತು (ಬಿ)

d) ಮೇಲಿನ ಮೂರು ಆಗಿರುವುದಿಲ್ಲ

**5) 'ರ್‍ಯಾಫಿಸನ್' ಮಾದರಿ ಸಹಕಾರ ಸಂಘಗಳು**

a) ಅಮೇರಿಕ ಖಂಡದ ಗ್ರಾಮೀಣ ಪ್ರದೇಶಗಳಲ್ಲಿ ಆರಂಭಗೊಂಡವು.

b) ಏಷ್ಯಾ ಖಂಡದ ಪಟ್ಟಣ ಪ್ರದೇಶದಲ್ಲಿ ಆರಂಭಗೊಂಡವು.

c) ಯೂರೋಪ್ ಖಂಡದ ಗ್ರಾಮೀಣ ಪ್ರದೇಶದಲ್ಲಿ ಆರಂಭಗೊಂಡವು.

d) ಯೂರೋಪ್ ಖಂಡದ ಪಟ್ಟಣ ಪ್ರದೇಶದಲ್ಲಿ ಆರಂಭಗೊಂಡವು

**6) 'ಷ್ಯೂಲ್ಜ್' ಮಾದರಿ ಸಹಕಾರ ಸಂಘಗಳು**

a) ಅಮೇರಿಕ ಖಂಡದ ಗ್ರಾಮೀಣ ಪ್ರದೇಶದಲ್ಲಿ ಆರಂಭಗೊಂಡವು.

b) ಏಷ್ಯಾ ಖಂಡದ ಪಟ್ಟಣ ಪ್ರದೇಶದಲ್ಲಿ ಆರಂಭಗೊಂಡವು.

c) ಯೂರೋಪ್ ಖಂಡದ ಪಟ್ಟಣ ಪ್ರದೇಶದಲ್ಲಿ ಆರಂಭಗೊಂಡವು.

d) ಯೂರೋಪ್ ಖಂಡದ ಗ್ರಾಮೀಣ ಪ್ರದೇಶದಲ್ಲಿ ಆರಂಭಗೊಂಡವು.

**7) ಸಹಕಾರ ವ್ಯವಸ್ಥೆ 'ಸುವರ್ಣ ಮಾಧ್ಯಮ' ಎಂದು ಪರಿಗಣಿಸಲು ಕಾರಣ**

a) 'ಆರ್ಥಿಕ ಸಬಲತೆ ಮತ್ತು ಸಾಮಾಜಿಕ ನ್ಯಾಯ' ಒದಗಿಸಲು ಸಾಧ್ಯವಿರುವ ವ್ಯವಸ್ಥೆ.

b) ಬಂಡವಾಳ ವೃದ್ಧಿಸಿಕೊಳ್ಳಲು ಇರುವ ಏಕೈಕ ವ್ಯವಸ್ಥೆ.

c) ಸಾರ್ವಜನಿಕ ಹಿತಾಸಕ್ತಿ ವಹಿಸಲು ಇರುವ ವ್ಯವಸ್ಥೆ.

d) ಮೇಲಿನ ಮೂರು ಆಗಿರುವುದಿಲ್ಲ

**8) 'ಥ್ರಿಫ್ಟ್' ಎಂದರೆ**

a) ಸಣ್ಣ ಉಳಿತಾಯ

b) ಅವಶ್ಯಕತೆ ಮೀರಿ ಕಡ್ಡಾಯ ಸಣ್ಣ ಉಳಿತಾಯ

c) ಅವಧಿ ಠೇವಣಿ

d) ಬಡ್ಡಿ ರಹಿತ ಠೇವಣಿ

**9) 'ಸಾಲ' ಅಥವ 'ಪತ್ತು' ಮತ್ತು 'ಸಹಕಾರ' ಒಂದೇ ನಾಣ್ಯದ ಎರಡು ಮುಖ ಎಂದು ಪರಿಗಣಿಸಲು ಕಾರಣ**

a) ಸಾಲ (ಪತ್ತು) ಸಹಕಾರ ಒಂದು ಅವಿಭಾಜ್ಯ ಅಂಗ.

b) ಸಹಕಾರ ಉಗಮ ಮತ್ತು ಬೆಳವಣಿಗೆ ಸಾಲ (ಪತ್ತು) ಕೇಂದ್ರೀಕೃತವಾಗಿದೆ.

c) ಸಹಕಾರ ವಲಯದಲ್ಲಿ ಬಹುಪಾಲು ಸಾಲ (ಪತ್ತು) ಚಟುವಟಿಕೆಯಾಗಿರುತ್ತದೆ.

d) ಮೇಲಿನ ಮೂರು ಆಗಿರುತ್ತದೆ.

**10) ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ. (ಪ್ರಾ.ಕೃ.ಗ್ರಾ.ಅ.ಬ್ಯಾಂಕುಗಳು)**

a) ಅಲ್ಪಾವಧಿ ಕೃಷಿ ಸಾಲ (ಪತ್ತು) ಸಹಕಾರ ಸಂಘ.

b) ದೀರ್ಘಾವಧಿ ಕೃಷಿ ಸಾಲ ಸಹಕಾರ ಸಂಘ.

c) ಕೃಷಿ ಪತ್ತೇತರ (ಸಾಲೇತರ) ಸಹಕಾರ ಸಂಘ.

d) ಮೇಲಿನ ಮೂರು ಆಗಿರುವುದಿಲ್ಲ.